# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 03-01-2024ರ ಬುಧವಾರ ಪೂರ್ವಾಹ್ನ 11-30 ಗಂಟೆಗೆ ನಡೆದ "ವಿಶೇಷ ಸಿಂಡಿಕೇಟ್ ಸಭೆ"ಯ ನಡಾವಳಿ.

<u>ಉಪಸ್ಥಿತರು:</u>

| | | |
|---|---|---|
| 1. | ಪ್ರೊ. ಎನ್.ಕೆ.ಲೋಕನಾಥ್ | ಕುಲಪತಿ ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರ ಪರವಾಗಿ<br>ಪ್ರೊ. ಎ.ಹೆಚ್.ಎಂ.ವಿಜಯಲಕ್ಷ್ಮಿ, ಜಂಟಿ ನಿರ್ದೇಶಕರು<br>ಕಾಲೇಜು ಶಿಕ್ಷಣ ಇಲಾಖೆ | ಸದಸ್ಯರು |
| 3. | ಪ್ರೊ. ಸೋನೆರ್ ನಂದಪ್ಪ | ಸದಸ್ಯರು |
| 4. | ಪ್ರೊ. ಟಿ.ಆರ್.ಮಾರುತಿ | ಸದಸ್ಯರು |
| 5. | ಡಾ. ಟಿ.ಆರ್.ಚಂದ್ರಶೇಖರ್, ಬಿ.ಇ., ಎಂಐಇ., ಎಂ.ಎ., ಪಿಎಚ್.ಡಿ., | ಸದಸ್ಯರು |
| 6. | ಶ್ರೀ ಗೋಕುಲ್ ಗೋವರ್ಧನ್, ಎಲ್‌ಎಲ್‌ಬಿ., ಎಂಬಿಎ., | ಸದಸ್ಯರು |
| 7. | ಡಾ. ಸೌಮ್ಯ ಈರಪ್ಪ ಕೆ | ಸದಸ್ಯರು |
| 8. | ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ | ಸದಸ್ಯರು |
| 9. | ಡಾ. ಗಣೇಶ್ ಕೆ | ಸದಸ್ಯರು |
| 10. | ಡಾ. ಮುಜೀದ ಬಾನು | ಸದಸ್ಯರು |
| 11. | ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 12. | ಶ್ರೀಮತಿ ಶೈಲಜ.ವಿ.ಆರ್., ಕೆ.ಎ.ಎಸ್ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿ |
| 13. | ಶ್ರೀಮತಿ ರೇಖಾ ಕೆ.ಎಸ್., ಕೆ.ಎಸ್.ಎ.ಎಸ್., | ಹಣಕಾಸು ಅಧಿಕಾರಿಗಳು ವಿಶೇಷ ಆಹ್ವಾನಿತರು |

<u>ಅನುಪಸ್ಥಿತರು:</u>

1. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ಶ್ರೀ ಸುರೇಶ್, ಕೆ.ಎ.ಎಸ್, ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು.

| ವಿಷಯ ಸಂಖ್ಯೆ | ವಿಷಯ ಸಂಕ್ಷಿಪ್ತವಾಗಿ |
|---|---|
| ವಿಶೇಷ ಸಭೆ 2024/Spl.1 | ವಿವಿಧ ವಿಭಾಗ/ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಅಧ್ಯಾಪಕೇತರರ ಉದ್ಯೋಗಿಗಳನ್ನು ಸೇವೆಯಲ್ಲಿ ಮುಂದುವರೆಸುವ ಬಗ್ಗೆ. |
| ವಿಶೇಷ ಸಭೆ 2024/Spl.2 | ತಾತ್ಕಾಲಿಕ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧ (Rationalize)ಗೊಳಿಸುವ ಬಗ್ಗೆ. |

ಮಾನ್ಯ ಕುಲಪತಿಗಳು ಮಾತನಾಡಿ, ಸುಮಾರು ವರ್ಷಗಳಿಂದ ತಾತ್ಕಾಲಿಕ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದು, ಅವರುಗಳನ್ನು ಮುಂದುವರಿಸುವ ಬಗ್ಗೆ ಈ ವಿಶೇಷ ಸಿಂಡಿಕೇಟ್ ಸಭೆಯನ್ನು ಏರ್ಪಡಿಸಲಾಗಿದೆ. ಈ ವಿಶೇಷ ಸಭೆಯಲ್ಲಿ ಇದೊಂದೇ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿ ನಿರ್ಣಯಿಸಬೇಕಾಗಿದೆ. ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ಬೋಧಕರ ಮತ್ತು ಬೋಧಕೇತರ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸಂಖ್ಯೆಯು ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆಗಿಂತ ಹೆಚ್ಚಿನದಾಗಿರುತ್ತದೆ. ವಿಶ್ವವಿದ್ಯಾನಿಲಯದಲ್ಲಿ ಅತಿಥಿ ಉಪನ್ಯಾಸಕರು ಹಾಗೂ ತಾತ್ಕಾಲಿಕ

ಅಧ್ಯಾಪಕೇತರ/ತಾಂತ್ರಿಕ/ವಿದ್ಯಾರ್ಥಿನಿಲಯದ ಉದ್ಯೋಗಿಗಳಿಗೆ ಪಾವತಿಸುತ್ತಿರುವ ವೇತನವು ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಹೊರೆಯಾಗಿದ್ದು, ಮಾಹೆಯಾನ ರೂ. 4 ರಿಂದ ರೂ. 4.50 ಕೋಟಿಗಳಾಗುತ್ತದೆ. ವಿಶ್ವವಿದ್ಯಾನಿಲಯಕ್ಕೆ ಆದಾಯದ ಮೂಲವಾದ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವೆಲ್ಲಾ ವೇತನ ನೀಡುವುದಕ್ಕೆ ವ್ಯಯಿಸಲಾಗುತ್ತಿದೆ. ಇದರಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ವರ್ಷದಲ್ಲಿ 10 ತಿಂಗಳುಗಳಿಗೆ ವೇತನ ಪಾವತಿಸಲಾಗುತ್ತಿದೆ.

ನಂತರ, ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಕಾರ್ಯಸೂಚಿಯಲ್ಲಿರುವ ವಿವಿಧ ವಿಭಾಗ/ಕಛೇರಿಗಳಲ್ಲಿ ಕರ್ತವ್ಯ ನಿರ್ವಹಿಸುತಿರುವ ತಾತ್ಕಾಲಿಕ ಅಧ್ಯಾಪಕೇತರರ ಉದ್ಯೋಗಿಗಳನ್ನು ಸೇವೆಯಲ್ಲಿ ಮುಂದುವರೆಸುವ ಬಗೆಗಿನ ವಿಷಯವನ್ನು ಕುಲಸಚಿವರು ಮಂಡಿಸಿದರು.

ಡಾ. ಟಿ.ಆರ್.ಚಂದ್ರಶೇಖರ್ ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ತಿಂಗಳಿಗೆ ಬರುತ್ತಿರುವ ಸರಾಸರಿ ಆದಾಯವೆಷ್ಟು ಮತ್ತು ಮಾಹೆಯಾನ 4-4.50 ಕೋಟಿ ವೇತನ ಪಾವತಿಸುತ್ತಿರುವುದು ಬೋಧಕರುಗಳಿಗೋ ಅಥವಾ ಬೋಧಕೇತರ ಸಿಬ್ಬಂದಿಗಳಿಗೋ ಎಂದು ಸ್ಪಷ್ಟನೆ ಕೋರಿದರು.

ಮಾನ್ಯ ಕುಲಪತಿಯವರು ಬೋಧಕ ಮತ್ತು ಬೋಧಕೇತರ ಉದ್ಯೋಗಿಗಳಿಗೆ ಈ ಮೊತ್ತವನ್ನು ವೇತನಕ್ಕಾಗಿ ಭರಿಸುತ್ತಿರುವುದಾಗಿ ಸ್ಪಷ್ಟೀಕರಿಸದರು.

ಹಣಕಾಸು ಅಧಿಕಾರಿಗಳು ಮಾತನಾಡಿ, ಅತಿಥಿ ಉಪನ್ಯಾಸಕರು ಹಾಗೂ ತಾತ್ಕಾಲಿಕ ಅಧ್ಯಾಪಕೇತರ/ತಾಂತ್ರಿಕ/ವಿದ್ಯಾರ್ಥಿನಿಲಯದ ಉದ್ಯೋಗಿಗಳಿಗೆ ಪಾವತಿಸುತ್ತಿರುವ ವೇತನವನ್ನು ವಿಶ್ವವಿದ್ಯಾನಿಲಯದ ಆಂತರಿಕ ಸಂಪನ್ಮೂಲದಿಂದ ಭರಿಸಲಾಗುತ್ತಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ವಿಶ್ವವಿದ್ಯಾನಿಲಯಕ್ಕೆ ಒಟ್ಟು 115 ಕೋಟಿ ರೂ.ಗಳ ಆದಾಯವಿತ್ತು. ಪ್ರಸಕ್ತ ಸಾಲಿನಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಕೇಂದ್ರಗಳು ಪ್ರತ್ಯೇಕವಾಗಿ ಮೂರು ನೂತನ ವಿಶ್ವವಿದ್ಯಾನಿಲಯವಾಗಿರುವುದರಿಂದ, ಪ್ರವೇಶಾತಿ ಶುಲ್ಕದ ಆದಾಯವು ಕುಂಠಿತವಾಗಿದ್ದು, 85-90 ಕೋಟಿ ರೂ.ಗಳ ಆದಾಯ ಬರುತ್ತದೆ.

ಕುಲಸಚಿವರು ಮಾತನಾಡಿ, ಸರ್ಕಾರದ ಉನ್ನತ ಶಿಕ್ಷಣ ಇಲಾಖಾ ಅಧಿಸೂಚನೆಯಂತೆ ಮೈಸೂರು ವಿಶ್ವವಿದ್ಯಾನಿಲಯವನ್ನು ವಿಭಜಿಸಿ ಮೂರು ನೂತನ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ತಲಾ 40 ರಷ್ಟು ವಿದ್ಯಾರ್ಥಿಗಳು ಮಾತ್ರ ಉಳಿಯುತ್ತಾರೆ. ಆದ್ದರಿಂದ ಪ್ರಸಕ್ತ ಸಾಲಿನಲ್ಲಿ 85-90 ಕೋಟಿ ರೂ.ಗಳಿಗಿಂತಲೂ ಕಡಿಮೆ ಆದಾಯ ಬರುತ್ತದೆ. ಮೈಸೂರು ವಿಶ್ವವಿದ್ಯಾನಿಲಯದ 227 ಸಂಯೋಜಿತ ಕಾಲೇಜುಗಳಲ್ಲಿ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ 103 ಸಂಯೋಜಿತ ಕಾಲೇಜುಗಳು ಉಳಿಯಲಿವೆ. ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಎರಡು ಮೂರು ಹೊಸ ಕಾಲೇಜುಗಳು ಸೇರ್ಪಡೆಯಾಗಿವೆ ಎಂಬುದನ್ನು ತಿಳಿಸಿದರು. ಪ್ರವೇಶಾತಿ ಮತ್ತು ಪರೀಕ್ಷಾ ಶುಲ್ಕದಲ್ಲಿ ಶೇ.40 ರಷ್ಟು ಮೈಸೂರು ವಿಶ್ವವಿದ್ಯಾನಿಲಯದ ಆದಾಯವಾಗಿರುವುದರಿಂದ, ಪ್ರಸಕ್ತ ಸಾಲಿನಲ್ಲಿ 50-60 ಕೋಟಿ ರೂ.ಗಳು ಮಾತ್ರ ಆದಾಯದ ಮೊತ್ತವಾಗಿರುತ್ತದೆ ಹಾಗೂ ವಿಷಯ ಸಂಖ್ಯೆ: 01 ಕಾರ್ಯಸೂಚಿಗೆ ಸಂಬಂಧಿಸಿದಂತೆ ವಿಶೇಷ ಸಿಂಡಿಕೇಟ್ ಸಭೆಗೆ ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ವಿವರ ಮಂಡಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿರುವ ಆಡಳಿತ ಶಾಖೆ, ಹಣಕಾಸು ಶಾಖೆ, ಪರೀಕ್ಷಾಂಗ ಶಾಖೆ ಹಾಗೂ ಮಾನಸಗಂಗೋತ್ರಿಯ ಎಲ್ಲಾ ಸ್ನಾತಕೋತ್ತರ ವಿಭಾಗಗಳು, ಕಛೇರಿಗಳು ಹಾಗೂ ಇನ್ನಿತರೆ ವಿಭಾಗಗಳಿಗೆ ತಾತ್ಕಾಲಿಕ ಅಧ್ಯಾಪಕೇತರ/ತಾಂತ್ರಿಕ/ವಿದ್ಯಾರ್ಥಿನಿಲಯದ ನೌಕರರುಗಳನ್ನು (1138 ಉದ್ಯೋಗಿಗಳು) ಒಂದು ವರ್ಷದ ಅವಧಿಗೆ ಬೇರೆ ಬೇರೆ ಸಾಲಿನಲ್ಲಿ ತಾತ್ಕಾಲಿಕವಾಗಿ ನೇಮಕ ಮಾಡಿಕೊಂಡಿರುತ್ತಾರೆ. ಈ ತಾತ್ಕಾಲಿಕ ಉದ್ಯೋಗಿಗಳನ್ನು ವರ್ಷವಾರು ನೇಮಕ ಮಾಡಲಾಗಿರುವ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಒಂದು ವರ್ಷದ ಅವಧಿಗೆ ಮಾಡಿಕೊಳ್ಳಲಾದ ಈ ತಾತ್ಕಾಲಿಕ ಉದ್ಯೋಗಿಗಳ ನೇಮಕಾತಿ ಅವಧಿಯು ದಿನಾಂಕ: 08-12-

2023ರಂದು ಕೊನೆಗೊಂಡಿದ್ದು, ಇವರುಗಳನ್ನು ಬಿಡುಗಡೆ ಮಾಡಲಾಗಿದೆ. ತಾತ್ಕಾಲಿಕ ಉದ್ಯೋಗಿಗಳನ್ನು ಮತ್ತೆ ಒಂದು ವರ್ಷದ ಅವಧಿಗೆ ಮರು ನೇಮಕಾತಿ ಮಾಡುವ ಮುನ್ನ ಸರ್ಕಾರದಿಂದ ಬಂದಿರುವ ಪತ್ರಗಳು/ ಸುತ್ತೋಲೆಗಳು ಮತ್ತು ನಿಯಮಗಳನ್ನು ಸಿಂಡಿಕೇಟ್ ಸಭೆಯ ಗಮನಕ್ಕೆ ತಂದು ನಿರ್ಣಯಕ್ಕಾಗಿ ಮಂಡಿಸಿದೆ. ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿ ಮುಂದುವರೆದಿರುವ 35 ಮಂದಿ ತಾತ್ಕಾಲಿಕ ಅಧ್ಯಾಪಕೇತರ ವರ್ಗದವರನ್ನು ಹೊರತುಪಡಿಸಿ, ಉಳಿದಿರುವ 1138 ತಾತ್ಕಾಲಿಕ ಉದ್ಯೋಗಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ತಾತ್ಕಾಲಿಕ ಉದ್ಯೋಗಿಗಳನ್ನು ಎರಡು ದಿವಸಗಳನ್ನು ಬಿಟ್ಟು ಪುನಃ ಮುಂದುವರೆಸುವ ಬಗ್ಗೆ ಎಲ್ಲಾ ವೃಂದದವರೊನ್ನಳಗೊಂಡಂತೆ ಸಿದ್ಧಪಡಿಸಲಾಗಿರುವ ಪಟ್ಟಿಯನ್ನು ಮತ್ತು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾಗಿರುವ ಹುದ್ದೆಗಳು, ಭರ್ತಿಯಾಗಿರುವ ಹುದ್ದೆಗಳು, ಖಾಲಿ ಹುದ್ದೆಗಳು ಮತ್ತು ತಾತ್ಕಾಲಿಕ ನೌಕರರುಗಳ ವಿವರಗಳ ಸಂಖ್ಯಾ ಚಿತ್ರಣವನ್ನು ಸಹ ಸಭೆಯ ಗಮನಕ್ಕೆ ತರಲಾಗಿದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಯ್ದೆ 2000 ಪ್ರಕರಣ ಸೆಕ್ಷನ್ 56(1) ರನ್ವಯ ಒಂದು ವರ್ಷದ ಅವಧಿಗೆ ತಾತ್ಕಾಲಿಕವಾಗಿ ನೇಮಕ ಮಾಡಿಕೊಳ್ಳುವುದಕ್ಕೆ ಮಾನ್ಯ ಕುಲಪತಿಗಳಿಗೆ ಅವಕಾಶವಿದೆ. ಇದರಡಿಯಲ್ಲಿ ಈ ತಾತ್ಕಾಲಿಕ ಉದ್ಯೋಗಿಗಳನ್ನು ನೇಮಕ ಮಾಡಿಕೊಂಡು ಪ್ರತಿ ವರ್ಷ ಮರು ನೇಮಕ ಮಾಡಿ ಮುಂದುವರೆಸಿಕೊಂಡು ಬರಲಾಗಿದೆ. ವಿಶ್ವವಿದ್ಯಾನಿಲಯದಲ್ಲಿ 17 ವಿದ್ಯಾರ್ಥಿನಿಲಯಗಳಿರುತ್ತವೆ ಇಲ್ಲಿ ಯಾವುದೇ ಮಂಜೂರಾದ ಹುದ್ದೆಗಳಿಲ್ಲ. ಅಧಿನಿಯಮವನ್ನು ಸರ್ಕಾರಕ್ಕೆ ಸಲ್ಲಿಸಿದ್ದಾಗಿಯೂ ಕಾರಣಾಂತರದಿಂದ ಅನುಮೋದನೆಯಾಗಿರುವುದಿಲ್ಲ. ಇಂತಹ ಕಡೆ 29 ತಾತ್ಕಾಲಿಕ ಉದ್ಯೋಗಿಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂಬ ಅಂಶವನ್ನು ಸಿಂಡಕೇಟ್‌ನ ಅವಗಾಹನೆಗೆ ಸಲ್ಲಿಸುತ್ತಾ, ಪ್ರತಿ ಬಾರಿಯು ಸರ್ಕಾರದಿಂದ ಆದೇಶಗಳು/ಸುತ್ತೋಲೆಗಳು ತಾತ್ಕಾಲಿಕ ನೇಮಕಾತಿಯ ಪ್ರಕ್ರಿಯೆಗಳಲ್ಲಿ ನಿಯಮಾನುಸಾರ ಕ್ರಮವಹಿಸಿಲ್ಲವೆಂದು ಅನೇಕ ಬಾರಿ ಪತ್ರಮುಖೇನ ಸೂಚನೆ ನೀಡಿದ್ದಾರೆ. ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ತಾತ್ಕಾಲಿಕ ಉದ್ಯೋಗಿಗಳನ್ನು ನೇಮಕಾತಿ ಮಾಡಿಕೊಂಡಿರುತ್ತೀರಿ, ಇದು ಸರಿಯಾದ ಕ್ರಮವಲ್ಲವೆಂದು ತಿಳಿಸಿರುತ್ತಾರೆ.

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯ-1), ಕರ್ನಾಟಕ ಸರ್ಕಾರದ ಸಚಿವಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ 29 ಯುಎಂವಿ 2015, ದಿನಾಂಕ: 14-08-2020 ರ ಪತ್ರದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡಿರುವುದು ಹಾಗೂ ಕೆಲವು ವಿಭಾಗಗಳಲ್ಲಿ ಅಗತ್ಯಕ್ಕಿಂತ ಹೆಚ್ಚು ಸಿಬ್ಬಂದಿಯನ್ನು ತಾತ್ಕಾಲಿಕವಾಗಿ ನೇಮಿಸಿಕೊಂಡಿರುವುದು ಕಂಡುಬಂದಿದೆ ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 213 ಯುಎನ್‌ಇ 2020, ದಿನಾಂಕ: 04-08-2020ರ ಸುತ್ತೋಲೆಯಲ್ಲಿ ಸರ್ಕಾರದ ಅನುಮತಿ ಪಡೆಯದೇ ಹೊರಗುತ್ತಿಗೆ/ಗುತ್ತಿಗೆ ಆಧಾರದಲ್ಲಿ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಿಕೊಂಡಲ್ಲಿ ಅದಕ್ಕೆ ಸಂಬಂಧಪಟ್ಟ ವಿಶ್ವವಿದ್ಯಾನಿಲಯದ ಮುಖ್ಯಸ್ಥರೆ ಹೊಣೆಗಾರರಾಗಿತ್ತಾರೆ. ಅಲ್ಲದೇ, ಸರ್ಕಾರದ ಆದೇಶದ ವಿರುದ್ಧವಾಗಿ ನೇಮಕ ಮಾಡಿಕೊಂಡಿರುವ ಹೊರಗುತ್ತಿಗೆ ಸಿಬ್ಬಂದಿಗಳನ್ನು ಕೂಡಲೇ ಬಿಡುಗಡೆಗೊಳಿಸುವಂತೆಯೂ ಸಹ ಸೂಚಿಸಿದೆ. ಸರ್ಕಾರದ ನಿಯಮಗಳ ವಿರುದ್ಧ ಹೊರಗುತ್ತಿಗೆ/ಗುತ್ತಿಗೆ ಆಧಾರದಲ್ಲಿ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ನೇಮಕ ಮಾಡಬಾರದೆಂದು ನಿರ್ದೇಶಿಸಿರುತ್ತಾರೆ.

ಸರ್ಕಾರದ ಪತ್ರ ಸಂಖ್ಯೆ: ಇಡಿ 145 ಯುಎನ್‌ಇ 2021, ಬೆಂಗಳೂರು ದಿನಾಂಕ: 02-06-2021ರ ಪತ್ರದಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1) ಇವರು ವಿಶ್ವವಿದ್ಯಾನಿಲಯಗಳಲ್ಲಿ ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಂಡಿರುವ ಸಿಬ್ಬಂದಿಗಳನ್ನು ಬಿಡುಗಡೆಗೊಳಿಸುವಂತೆ ಸರ್ಕಾರದ ಹಿಂದಿನ

ಸುತ್ತೋಲೆಗಳಲ್ಲಿ ಕಟ್ಟುನಿಟ್ಟಾಗಿ ವಿಶ್ವವಿದ್ಯಾನಿಲಯಗಳಿಗೆ ನಿರ್ದೇಶನ ನೀಡಿದ್ದಾಗ್ಯೂ, ವಿಶ್ವವಿದ್ಯಾನಿಲಯಗಳು ಸರ್ಕಾರದ ಸೂಚನೆಯನ್ನು ಪಾಲಿಸದೇ ಇರುವುದು ಸರ್ಕಾರದ ನೀತಿಗೆ ವಿರುದ್ಧವಾಗಿರುತ್ತದೆ ಮತ್ತು ನಿಯಮಬಾಹಿರವಾಗಿರುತ್ತದೆ. ಆದ್ದರಿಂದ, ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರದ ಪೂರ್ವಾನುಮೋದನೆ ಪಡೆಯದೆ ಹಾಗೂ ಮಂಜೂರಾದ ಹುದ್ದೆಗಳಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ತಾತ್ಕಾಲಿಕ/ಗುತ್ತಿಗೆ/ಹೊರ ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಿಕೊಂಡಿರುವ ಬೋಧಕ/ಬೋಧಕೇತರ ಸಿಬ್ಬಂದಿಗಳನ್ನು ಈ ಕೂಡಲೇ ವಿಶ್ವವಿದ್ಯಾನಿಲಯದ ಸೇವೆಯಿಂದ ಬಿಡುಗಡೆಗೊಳಿಸುವಂತೆ ತಿಳಿಸುತ್ತಾ, ತಪ್ಪಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ತಮ್ಮ ಮೇಲೆ ಶಿಸ್ತು ಕ್ರಮ ಜರುಗಿಸಲು ಕ್ರಮವಹಿಸಲಾಗುವುದೆಂದು ತಿಳಿಸಿ ಮತ್ತೊಮ್ಮೆ ನಿರ್ದೇಶಿಸಿರುತ್ತಾರೆ

ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1) ಇವರ ಸುತ್ತೋಲೆ ಸಂಖ್ಯೆ: ಇಡಿ 15 ಯುಎನ್ಇ 2023, ಬೆಂಗಳೂರು ದಿನಾಂಕ: 08-08-2023 ರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಉಮಾದೇವಿ ಹಾಗೂ ಇತರರ ಪ್ರಕರಣದಲ್ಲಿ ದಿನಾಂಕ: 10-04-2006ರಂದು ನೀಡಿರುವ ತೀರ್ಪಿನಲ್ಲಿ ಪ್ರಚುರಪಡಿಸಿರುವ ಕಾನೂನಿನ್ವಯ ಗುತ್ತಿಗೆ/ಹೊರ ಗುತ್ತಿಗೆ/ತಾತ್ಕಾಲಿಕ ಸಿಬ್ಬಂದಿಗಳ ಸೇವಾ ಸಕ್ರಮಾತಿಗಾಗಲಿ ಅಥವಾ ನೇರ ನೇಮಕಾತಿಯಲ್ಲಿ ವಿಶೇಷ ಆದ್ಯತೆ ನೀಡಲು ಅವಕಾಶವಿರುವುದಿಲ್ಲ. ಆದ್ದರಿಂದ, ಉನ್ನತ ಶಿಕ್ಷಣ ಇಲಾಖೆಯ ವ್ಯಾಪ್ತಿಯ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಸರ್ಕಾರದ ಪೂರ್ವಾನುಮೋದನೆ ಇಲ್ಲದೇ ನಿಯಮಬಾಹಿರವಾಗಿ ಮಂಜೂರಾದ ಹುದ್ದೆಗಳಿಗೂ ಮೀರಿ ಅಗತ್ಯಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಂಡ ನೌಕರರನ್ನು ಸೇವೆಯಿಂದ ಬಿಡುಗಡೆಗೊಳಿಸಿ ವಿಶ್ವವಿದ್ಯಾಲಯಗಳ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧಗೊಳಿಸಲು (Rationalize) ಕ್ರಮವಹಿಸುವಂತೆ ವಿಶ್ವವಿದ್ಯಾನಿಲಯಗಳಿಗೆ ಸೂಚಿಸಲಾಗಿದೆ. ಈ ವಿಚಾರವಾಗಿ ಪುನರಾವರ್ತಿತ ಸುತ್ತೋಲೆಗನ್ನು ಹೊರಡಿಸಲು ಅವಕಾಶ ನೀಡದಂತೆ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಅನುಸರಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ತಿಳಿಸಿದೆ. ಈ ಸೂಚನೆಗಳ ಉಲ್ಲಂಘನೆ / ಲೋಪಗಳಿಗೆ ಹಾಗೂ ಅದರ ಪರಿಣಾಮಗಳಿಗೆ ವಿಶ್ವವಿದ್ಯಾನಿಲಯದ ಕುಲಪತಿ, ಕುಲಸಚಿವರು ಮತ್ತು ಹಣಕಾಸು ಅಧಿಕಾರಿ ಹಾಗೂ ಸಂಬಂಧಿಸಿದ ಅಧಿಕಾರಿ/ನೌಕರರೇ ನೇರ ಹೊಣೆಗಾರರಾಗುತ್ತಾರೆಂದು ತಿಳಿಸಲಾಗಿದೆ.

ಕುಲಸಚಿವರು ಮೇಲ್ಕಂಡ ಅನುಬಂಧಗಳನ್ನು ಸಭೆಯ ಗಮನಕ್ಕೆ ತರುತ್ತಾ, 1138 ತಾತ್ಕಾಲಿಕ ಉದ್ಯೋಗಿಗಳನ್ನು ಮುಂದುವರೆಸುವ ಬಗ್ಗೆ ಚರ್ಚಿಸಿ ಸಭೆಯು ನಿರ್ಣಯಿಸಬೇಕಾಗಿ ಕೋರಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಮೇಲ್ಕಂಡ ವಿವರಣೆಗಳನ್ನು ಗಮನಿಸಿದಾಗ, 2020 ರಿಂದ ಅನೇಕ ಸರ್ಕಾರದ ಸುತ್ತೋಲೆಗಳು/ಆದೇಶಗಳು ಬಂದಿದೆಯೆಂದು ತಿಳಿಸಿರುತ್ತೀರಿ. ಸರ್ಕಾರದ ಸುತ್ತೋಲೆ/ಆದೇಶ ಬಂದಂತಹ ಸಂದರ್ಭಗಳಲ್ಲಿ ಅನೇಕ ಸಿಂಡಿಕೇಟ್ ಸಭೆಗಳನ್ನು ನಡೆಸಲಾಗಿದೆ. ಆ ಸಂದರ್ಭದಲ್ಲಿ ತಾತ್ಕಾಲಿಕ ಉದ್ಯೋಗಿಗಳನ್ನು ಪ್ರತಿ ವರ್ಷ ನೇಮಕಾತಿ ಆದೇಶ ನೀಡಲಾಗಿದೆ. ಸಿಂಡಿಕೇಟ್ ಸಭೆಯಲ್ಲಿ ಯಾವ ನಿರ್ಣಯವನ್ನು ಕೈಗೊಳ್ಳದೆ ನೇಮಕಾತಿ ಆದೇಶ ನೀಡುವಂತಿಲ್ಲ. ಸಿಂಡಿಕೇಟ್ ಸಭೆಯಲ್ಲಿ ಏನು ನಿರ್ಣಯವನ್ನು ತೆಗೆದುಕೊಂಡಿರುತ್ತೀರಿ ಅಥವಾ ಸರ್ಕಾರದ ಸುತ್ತೋಲೆಯನ್ನು ಏಕೆ ignore ಮಾಡಿದ್ದೀರಿ. 2020 ರಿಂದ ನಿರಂತರವಾಗಿ ಸರ್ಕಾರದಿಂದ ಅನೇಕ ಸುತ್ತೋಲೆಗಳು ಬರುತ್ತಿವೆ. ಈ ಸಂಬಂಧ ಕ್ರಮವಹಿಸದೇ ಇರುವುದಕ್ಕೆ ಕುಲಪತಿ, ಕುಲಸಚಿವ, ಹಣಕಾಸು ಅಧಿಕಾರಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಹೊಣೆಗಾರರಾಗಿರುತ್ತೀರಿ ಎಂದು ತಿಳಿಸಿದ್ದರೂ ಮತ್ತು ಇಂತಹ ಗಂಭೀರ ಸಮಸ್ಯೆಯನ್ನು ignore ಮಾಡಿಕೊಂಡು ಮುಂದುವರೆಸಿದ್ದೀರ ಅಥವಾ ಇದಕ್ಕೇನಾದರೂ ಕ್ರಮಕೈಗೊಂಡಿದ್ದೀರಾ ಅಥವಾ ಯಾವ ನಿಯಮದಡಿ ತಾತ್ಕಾಲಿಕ

ಉದ್ಯೋಗಿಗಳನ್ನು ಮತ್ತೆ ಮತ್ತೆ ನೇಮಕಾತಿ ಆದೇಶ ಕೊಟ್ಟು ಮತ್ತೆ ಮತ್ತೆ ಅಂತಹುದೇ ತಪ್ಪುಗಳನ್ನು ಮಾಡಿಕೊಂಡು ಬರಲಾಗಿದೆ. ಇದುವರೆವಿಗೂ ಏಕೆ ಯಾವ ರೀತಿಯಲ್ಲೂ ನಿರ್ಣಯವನ್ನು ತೆಗೆದುಕೊಂಡಿರುವುದಿಲ್ಲವೆಂದು ತಿಳಿಸಿ ಈ ಬಗ್ಗೆ ಸ್ಪಷ್ಟಪಡಿಸಬೇಕಾಗಿ ಕೋರಿದರು. ಹಿಂದೆ ಇದ್ದಂತಹ ಆಡಳಿತ ಮಂಡಳಿ ಈ ರೀತಿಯಲ್ಲಿ ಸರ್ಕಾರದ ಸುತ್ತೋಲೆ/ಆದೇಶ ಬಂದಾಗ ಯಾವ ರೀತಿಯಲ್ಲಿ ನಿರ್ಣಯ ತೆಗೆದುಕೊಂಡಿದೆ ಏಕೆಂದರೆ ಅವುಗಳನ್ನು ಪರಾಮರ್ಶೆ ಮಾಡಿ, ಈಗ ತೀರ್ಮಾನವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಸಂಬಂಧ ವಿಶ್ವವಿದ್ಯಾನಿಲಯದಲ್ಲಿರುವ ಮಾಹಿತಿಯನ್ನು ಒದಗಿಸಬೇಕು. ಹಲವಾರು ವರ್ಷಗಳಿಂದ ಈ ರೀತಿಯಾಗಿ ಸರ್ಕಾರದ ಸುತ್ತೋಲೆ/ಆದೇಶ ಬಂದಾಗ, ಏನಾದರೂ ನಿರ್ಣಯ ತೆಗೆದುಕೊಂಡಿರುತ್ತಾರೆ. ನಿರ್ಣಯವಿಲ್ಲದೆ ignore ಮಾಡಿಕೊಂಡು ಬಂದಿರುವುದಕ್ಕೆ ಸಾಧ್ಯವಿಲ್ಲ. ಯಾವುದಾದರೂ ಸಂದರ್ಭದಲ್ಲಿ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ ನಿರ್ಣಯವಾಗಿರುತ್ತದೆ. ಅದು ಯಾವ ರೀತಿಯ ನಿರ್ಣಯವೆಂದು ತೆಗೆದುಕೊಂಡು ಹೆಜ್ಜೆ ಇಡಬೇಕಾಗಿದೆ.

ಮಾನ್ಯ ಕುಲಪತಿಯವರು ಮಾತನಾಡಿ, ಈ ತಾತ್ಕಾಲಿಕ ನೌಕರರನ್ನು ಮುಂದುವರೆಸುವುದಾಗಿ ಯಾವುದೇ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿಲ್ಲ. ಆದರೆ ಇಂತಹ ಉದ್ಯೋಗಿಗಳ ವೇತನಕ್ಕೆ ವಿಶ್ವವಿದ್ಯಾನಿಲಯವು ವ್ಯಯಿಸುತ್ತಿರುವ ಮಾಹಿತಿಯನ್ನು ಪ್ರತಿ ವರ್ಷ ಹಣಕಾಸು ಹಾಗೂ ಸಿಂಡಿಕೇಟ್‌ನ ಗಮನಕ್ಕೆ ತರುವುದು ಸೂಕ್ತವಾಗಿರುತ್ತದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದಿರುವುದಲ್ಲದೆ, ಹಣಕಾಸು ಅಧಿಕಾರಿಗಳು ಇಂತಹ ವಿಷಯವನ್ನು ಪ್ರಾಧಿಕಾರಿಗಳ ಗಮನಕ್ಕೆ ತರುವುದು ನಿಯಮವಾಗುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯವು ವಿಭಜನೆಯಾಗಿ ಆರ್ಥಿಕ ಹೊರೆ ಹೆಚ್ಚಾಗಿದೆ. 1138 ತಾತ್ಕಾಲಿಕ ಉದ್ಯೋಗಿಗಳ ಮಾಹಿತಿ ನೀಡಿರುವುದು ಸರಿಯಷ್ಟೆ. ಆದರೆ ಮಾಹಿತಿಯು ಅಪೂರ್ಣವಾಗಿದೆ. ಮಾಹಿತಿ ಪಟ್ಟಿಯಲ್ಲಿ ಉದ್ಯೋಗಿ ಸಂಖ್ಯೆ, ಉದ್ಯೋಗಿಯ ಹೆಸರು, ಕಾರ್ಯನಿರ್ವಹಿಸುತ್ತಿರುವ ಕಛೇರಿ, ಮಾಹೆಯಾನ ಎಷ್ಟು ಸಂಚಿತ ವೇತನ ನೀಡಿರುತ್ತೀರಿ, ಈ ತಾತ್ಕಾಲಿಕ ಉದ್ಯೋಗಿಗಳು ಯಾವ ಅವಧಿಯಲ್ಲಿ ನೇಮಕಾತಿ ಆಗಿರುವುದು, ವಿದ್ಯಾರ್ಹತೆ ಮಾಹಿತಿ ನೀಡಿರುವುದಿಲ್ಲ. ಏಕೆಂದರೆ, ವಿದ್ಯಾರ್ಹತೆಗನುಗುಣವಾಗಿ ನೇಮಕಾತಿ ಮಾಡಿರುವುದು ಕಂಡುಬಂದಿದೆ. 1138 ಮಂದಿ ತಾತ್ಕಾಲಿಕ ಉದ್ಯೋಗಿಗಳಾಗಿದ್ದು, ಸುಧಾರಣೆ ತರಬೇಕಾಗಿರುವುದರಿಂದ ವಿದ್ಯಾರ್ಹತೆ, ಅಲಂಕರಿಸಿರುವ ಹುದ್ದೆ ಮತ್ತು ಯಾವ ಅವಧಿಯಲ್ಲಿ ನೇಮಕಾತಿ ಆಗಿರುವುದು ಈ ಎಲ್ಲಾ ಮಾಹಿತಿಗಳನ್ನು ತೆಗೆದುಕೊಂಡು ಮಾಹಿತಿಯ ಪಟ್ಟಿಯನ್ನು ಪೂರ್ಣಗೊಳಿಸಬೇಕು. ಕುಲಸಚಿವರಿಗೆ ಲಭ್ಯವಿರುವ ಮಾಹಿತಿಯ ಪ್ರಕಾರ ಈ ಪ್ರಸ್ತಾವನೆಯು ಪ್ರಥಮ ಬಾರಿಗೆ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿರುವ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಸಭೆ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. 2020ನೇ ಇಸವಿಯಿಂದ ಸರ್ಕಾರದಿಂದ ಸುತ್ತೋಲೆ/ ಆದೇಶಗಳು ಬಂದಿರುತ್ತವೆ. ಇದುವರೆವಿಗೂ ಅಂದಾಜಿನ ಪ್ರಕಾರ 36 ಸಿಂಡಿಕೇಟ್ ಸಭೆಗಳು ಜರುಗಿದೆ. ಆ 36 ಸಿಂಡಿಕೇಟ್ ಸಭೆಯಲ್ಲಿ ಏನಾದರೂ ಸರ್ಕಾರದಿಂದ ಮಾರ್ಗದರ್ಶನಗಳು, ಸಮಿತಿಗಳ ರಚನೆ ಅಥವಾ ಸರ್ಕಾರವೇ ತೀರ್ಮಾನಿಸಿರುವ ಬಗ್ಗೆ ಚರ್ಚೆಯಾಗಿದ್ದರೆ, ಆ ಉಲ್ಲೇಖ ತೀರ್ಮಾನ ತೆಗೆದುಕೊಳ್ಳಲು ಸಹಾಯಕವಾಗುತ್ತದೆ. ಈ ಬಗ್ಗೆ ತಾಂತ್ರಿಕ ಸಲಹಾ ಸಮಿತಿ ಅಥವಾ ಪರಿಶೀಲನಾ ಸಮಿತಿಯ ರಚನೆ ಮಾಡಿ, ಪೂರ್ಣ ಮಾಹಿತಿಯೊಂದಿಗೆ ಸೇವಾ ಹಿರಿತನವನ್ನು ಗಮನಿಸಿ ತೀರ್ಮಾನ ತೆಗೆದುಕೊಳ್ಳುವುದು ಸೂಕ್ತ. ಸಮಿತಿಯನ್ನು ರಚನೆ ಮಾಡಿದರೆ ಮಾತ್ರ ಎಲ್ಲಾ ವಿಷಯಗಳನ್ನು ಚರ್ಚೆ ಮಾಡಿ, ಹೊಸ ರೂಪುರೇಷೆಗಳನ್ನು ತರಬಹುದು. ಅದರಲ್ಲೂ ಸಮಿತಿ ರಚನೆಯು ತಜ್ಞರ ಸಮಿತಿಯಾಗಬೇಕು. ಎಲ್ಲಾ ಮಾನದಂಡಗಳನ್ನು ಬಳಸಿಕೊಳ್ಳಬೇಕು. ಸಮಿತಿ ರಚನೆ ಮಾಡಿ ಅಂತಿಮವಾಗಿ ವಿಶ್ವವಿದ್ಯಾನಿಲಯಕ್ಕೆ

ಹೊರೆಯಾಗದಂತೆ ಅನುಕೂಲವಾಗುವುದಕ್ಕೆ, ಜೊತೆಗೆ ಎಲ್ಲಕ್ಕಿಂತ ಮೀಗಿಲಾಗಿ ಸರ್ಕಾರದ ನಿಯಮಾವಳಿಗಳನ್ನು ಪಾಲಿಸಬೇಕು. ನಾವುಗಳು ಏನೇ ಮಾತನಾಡಿದ್ದರೂ ಕೂಡ ಅಂತಿಮವಾಗಿ ಸರ್ಕಾರದ ಆದೇಶವನ್ನು ಎತ್ತಿಹಿಡಿಯಬೇಕು. ಏಕೆಂದರೆ, ಅದರ ನಿಯಮದಲ್ಲೇ ನಾವುಗಳು ಕಾರ್ಯನಿರ್ವಹಿಸುತ್ತಿರುವುದು. ಹಾಗಾಗೀ ಸರ್ಕಾರದ ಆದೇಶವನ್ನು ಗಮನದಲ್ಲಿಟ್ಟುಕೊಂಡು ತಾವು ಒಂದು ತಜ್ಞರ ಸಮಿತಿಯನ್ನು ರಚನೆ ಮಾಡಿ, ಅದರ ವರದಿಯನ್ವಯ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಿ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಮಾನ್ಯ ಕುಲಪತಿಗಳು ಮಾತನಾಡಿ, ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು-1) ಇವರ ಸುತ್ತೋಲೆ ಸಂಖ್ಯೆ: ಇಡಿ 15 ಯುಎನ್‌ಇ 2023, ಬೆಂಗಳೂರು ದಿನಾಂಕ: 08-08-2023ರ ಸುತ್ತೋಲೆ ಬಂದ ಅವಧಿಯಲ್ಲಿ ಕುಲಪತಿಗಳು ಕಾರ್ಯನಿರ್ವಹಿಸುತ್ತಿರಲಿಲ್ಲ. ಆ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಆಡಳಿತವನ್ನು ನಿರ್ವಹಿಸುತ್ತಿದ್ದ ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳು ಯಾವ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಸರ್ಕಾರದ ಸುತ್ತೋಲೆಗೆ ಸಂಬಂಧಿಸಿದಂತೆ ಕಡತವನ್ನು ಈಗ ಮಂಡಿಸಲಾಗಿದ್ದು, ಡಿಸೆಂಬರ್ 2023ರ ಮಾಹೆಯಲ್ಲಿ ಎಲ್ಲಾ ತಾತ್ಕಾಲಿಕ ಉದ್ಯೋಗಿಗಳನ್ನು ಬಿಡುಗಡೆ ಮಾಡಿರುವುದರಿಂದ ಸೂಕ್ತ ನಿರ್ಣಯವನ್ನು ತೆಗೆದುಕೊಳ್ಳುವ ಉದ್ದೇಶದಿಂದ ವಿಷಯವನ್ನು ಮಂಡಿಸಲು ತೀರ್ಮಾನಿಸಿ ಈ ವಿಶೇಷ ಸಿಂಡಿಕೇಟ್ ಸಭೆಯನ್ನು ಕರೆಯಲಾಗಿದೆ ಎಂದು ತಿಳಿಸಿದರು. ಆಯವ್ಯಯ (Budget) ಸಿದ್ಧಪಡಿಸುವಾಗ ಸಂಬಂಧಪಟ್ಟ ಶೀರ್ಷಿಕೆಯಲ್ಲಿ ವೇತನದ ಬಗ್ಗೆ ವರದಿಯನ್ನು ನಮೂದಿಸಿ, ತಾತ್ಕಾಲಿಕ ಉದ್ಯೋಗಿಗಳಿಗೆ ಮಾಹೆಯಾನ ರೂ. 4.00 ರಿಂದ ರೂ. 4.50 ಕೋಟಿ ರೂ.ಗಳನ್ನು ವೇತನವನ್ನು ಪಾವತಿಸಿರುವ ಹಿನ್ನೆಲೆಯಲ್ಲಿ ಹಣಕಾಸು ಸಮಿತಿಯಲ್ಲಿ ಅನುಮೋದನೆ ಪಡೆದಿದ್ದರೂ ಸಹ ಸಿಂಡಿಕೇಟ್ ಸಭೆಯಲ್ಲೂ ಅನುಮೋದನೆ ಪಡೆಯಬೇಕೆಂದರು. ಬೋಧಕರಿಗೆ ವಾರಕ್ಕೆ 4 ಗಂಟೆಗಳ ಬೋಧನಾ ಕಾರ್ಯಭಾರಕ್ಕೆ ಸಂಬಂಧಿಸಿದಂತೆ, ಆಯಾಯ ವಿಷಯಕ್ಕೆ ತಜ್ಞರ ಅವಶ್ಯಕತೆ ಇರುವಾಗ ತಜ್ಞರನ್ನು ಆಹ್ವಾನಿಸುವ ಉದ್ದೇಶದಿಂದ 4 ಗಂಟೆಗಳನ್ನು ನಿಗದಿಪಡಿಸಲಾಯಿತು. ಅತಿಥಿ ಉಪನ್ಯಾಸಕರುಗಳ ಸಂಖ್ಯೆ ಹೆಚ್ಚಾದ ಸಂದರ್ಭದಲ್ಲಿ 4 ಗಂಟೆಗಳ ಬದಲು 8 ಮತ್ತು 12 ಗಂಟೆಗಳೆಂದು ನಿಗದಿಪಡಿಸಲಾಯಿತು.

ಕುಲಸಚಿವರು ಮಾತನಾಡಿ, ಹಿಂದಿನ ಸಿಂಡಿಕೇಟ್ ಸಭೆಗಳಲ್ಲಿ ತಾತ್ಕಾಲಿಕ ನೌಕರರುಗಳಿಗೆ ಸಂಬಂಧಿಸಿದ ವಿಷಯವನ್ನು ಮಂಡಿಸಿರುವುದಿಲ್ಲ. ಕಳೆದ ಒಂದು ವರ್ಷದಿಂದ ಕುಲಸಚಿವರಾಗಿ ನಾನು ಕಾರ್ಯನಿರ್ವಹಿಸುತ್ತಿದ್ದು, ಕುಲಪತಿಯವರ ಆದೇಶದ ಮೇರೆಗೆ ಡಿಸೆಂಬರ್ 2022 ರಲ್ಲಿ ಮರು ನೇಮಕಾತಿ ಮಾಡಲಾಗಿದೆ ಹೊರತು, ಹೊಸದಾಗಿ ಯಾವುದೇ ವೃಂದದ ಒಂದು ತಾತ್ಕಾಲಿಕ ನೇಮಕಾತಿಯನ್ನು ಮಾಡಿರುವುದಿಲ್ಲ. 1992 ರಿಂದ 2021 ರ ಅವಧಿಯಲ್ಲಿ ಅಂದರೆ ವರ್ಷಾವಾರು ತಾತ್ಕಾಲಿಕವಾಗಿ ನೇಮಕಾತಿ ಆಗಿರುವವರ ಅಧ್ಯಾಪಕೇತರ/ತಾಂತ್ರಿಕ/ವಿದ್ಯಾರ್ಥಿನಿಲಯದ ಉದ್ಯೋಗಿಗಳ ಪಟ್ಟಿಯನ್ನು ಸಿದ್ಧಪಡಿಸಲಾಗಿರುತ್ತದೆ. ಹಿಂದಿನ ವರ್ಷದಲ್ಲಿ ಸರ್ಕಾರವು ವಿಶ್ರಾಂತ ಕುಲಪತಿಯವರಾದ ಪ್ರೊ. ಕೆಂಪರಾಜು ಅವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಪರಿಶೀಲನೆ ಮಾಡಿದ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಅತಿಥಿ ಉಪನ್ಯಾಸಕರುಗಳು ವೇತನವನ್ನು ಹೆಚ್ಚಿಸಬೇಕೆಂದು ನವೆಂಬರ್ 2022ರ ಮಾಹೆಯಲ್ಲಿ ಮುಷ್ಕರ ಹೂಡಿದರು. ಅತಿಥಿ ಉಪನ್ಯಾಸಕರುಗಳ ವೇತನದ ಹೆಚ್ಚಳದ ಬಗ್ಗೆ ದಿನಾಂಕ: 09-11-2022ರಂದು ನಡೆದ ಹಣಕಾಸು ಸಮಿತಿಯಲ್ಲಿ ಮಂಡಿಸಿದಾಗ, ಆ ಸಂದರ್ಭದಲ್ಲಿ ಹಾಜರಾಗಿದ್ದ ಹಣಕಾಸು ಸಮಿತಿ ಸದಸ್ಯರು, ಸರ್ಕಾರದ ಪ್ರತಿನಿಧಿಗಳು, ಉನ್ನತ ಶಿಕ್ಷಣ ಇಲಾಖೆಯವರು ವೇತನವನ್ನು ಹೆಚ್ಚಿಸಲು ಸಹಮತವನ್ನು ವ್ಯಕ್ತಪಡಿಸಲಿಲ್ಲ. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆಯು

ದಿನಾಂಕ: 11-01-2023 ರಂದು ಅನಧಿಕೃತ ಟಿಪ್ಪಣಿಯನ್ನು ರವಾನಿಸಲಾಗಿದ್ದು, ಅದರಲ್ಲಿ ಮೈಸೂರು ವಿಶ್ವವಿದ್ಯಾನಿಲಯವು ಬೋಧಕ/ಬೋಧಕೇತರ ಹುದ್ದೆಗಳಲ್ಲಿ ಮಂಜೂರಾಗಿರುವ ಹುದ್ದೆಗಳಿಗೂ ಮೀರಿ ಅಧಿಕ ಸಂಖ್ಯೆಯಲ್ಲಿ ತಾತ್ಕಾಲಿಕ ಸಿಬ್ಬಂದಿಗಳನ್ನು ನೇಮಿಸಿಕೊಂಡಿದ್ದು, ಅವುಗಳನ್ನು ಸಹ ಮರುಪರಿಶೀಲಿಸತಕ್ಕದ್ದು ಎಂದು ತಿಳಿಸುತ್ತಾ ಆರು ಕಾರಣಗಳನ್ನು ನೀಡಿದ್ದು, ಅದರಲ್ಲಿ ವಿವಿಧ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರು ಮತ್ತು ಇತರೆ ತಾತ್ಕಾಲಿಕ ಬೋಧಕರ ಸಿಬ್ಬಂದಿಗಳ ವೇತನ ಪರಿಷ್ಕರಣೆ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಒಪ್ಪುವುದಿಲ್ಲವೆಂದು ತಿಳಿಸಿದೆ ಹಾಗೂ ಹಿಂದೆ ಅತಿಥಿ ಉಪನ್ಯಾಸಕರುಗಳಿಗೆ ಹಾಗೂ ತಾತ್ಕಾಲಿಕ ಬೋಧಕೇತರ ಸಿಬ್ಬಂದಿಗೂ ವೇತನ ಹೆಚ್ಚಿಸಲಾಗಿತ್ತು. ವೇತನದ ಆದೇಶವನ್ನು ಹಿಂಪಡೆಯಬೇಕೆಂದು ಸರ್ಕಾರವು ನಿರ್ದೇಶಿಸಿದ ಹಿನ್ನೆಲೆಯಲ್ಲಿ, ಸಿಂಡಿಕೇಟ್ ಸಭೆಯಲ್ಲಿ ವಿಷಯವನ್ನು ಮಂಡಿಸಿ ವೇತನಗಳನ್ನು ಹೆಚ್ಚಿಸಿರುವ ಆದೇಶವನ್ನು ಹಿಂಪಡೆಯಲಾಯಿತು. ಸರ್ಕಾರವು ಹೊರಡಿಸಿರುವ ಸುತ್ತೋಲೆಗಳನ್ನು ಕುಲಪತಿಯವರ ಗಮನಕ್ಕೆ ಕಡತದಲ್ಲಿ ತಂದಾಗ ಸಿಂಡಿಕೇಟ್ ಸಭೆಗೆ ವಿಷಯವನ್ನು ಮಂಡಿಸಲು ಅನುಮೋದನೆಯನ್ನು ನೀಡಿದರು. ಆದ್ದರಿಂದ ಈ ಕಾರ್ಯಸೂಚಿಯನ್ನು ವಿಶೇಷ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲಾಗಿದೆ. 1992ನೇ ಇಸವಿಯಿಂದ ಇದುವರೆವಿಗೂ ನನಗೆ ಲಭ್ಯವಿರುವ ಮಾಹಿತಿ ಪ್ರಕಾರ ತಾತ್ಕಾಲಿಕ ಉದ್ಯೋಗಿಗಳ ನೇಮಕಾತಿ, ನೇಮಕಾತಿ ಆದೇಶ ಹಾಗೂ ಪ್ರತಿ ವರ್ಷ ಎರಡು ದಿನ ಬಿಟ್ಟು ಮರು ನೇಮಕಾತಿ ಮಾಡಿರುವ ಬಗ್ಗೆಯೂ ಸಿಂಡಿಕೇಟ್ ಸಭೆಯಲ್ಲಿ ಪ್ರಸ್ತಾಪಿಸಿರುವುದಿಲ್ಲ. ಹಾಗೆಯೇ, ವೇತನದ ಪಾವತಿಸುವ ಬಗ್ಗೆಯೂ ಹಣಕಾಸು ಸಮಿತಿ ಹಾಗೂ ಸಿಂಡಿಕೇಟ್ ಸಭೆಗಳಲ್ಲಿ ಪ್ರಸ್ತಾಪಿಸಿರುವುದಿಲ್ಲ ಎಂದು ತಿಳಿಸುತ್ತಾ, ತಾತ್ಕಾಲಿಕವಾಗಿ ಅಂತಿಮವಾಗಿ ನೇಮಕ ಮಾಡಿರುವ ದಿನಾಂಕ: 01-06-2022 ಎಂದು ಸಭೆಯ ಗಮನಕ್ಕೆ ತಂದರು. ಕೋರ್ಸ್‌ಗಳು ಚಾಲನೆಯಲ್ಲಿರಬೇಕಾದರೆ ಅಧ್ಯಾಪಕರುಗಳ ನೇಮಕಾತಿ ಅನಿವಾರ್ಯ. ವಿಶ್ವವಿದ್ಯಾನಿಲಯಕ್ಕೆ ಪ್ರಥಮವಾಗಿ ಬೇಕಾಗಿರುವುದು ವಿದ್ಯಾರ್ಥಿಗಳು. ಎರಡನೆಯದಾಗಿ ಅಧ್ಯಾಪಕರುಗಳು. ಖಾಯಂ ಅಧ್ಯಾಪಕರುಗಳು ಬಹಳಷ್ಟು ಕಡಿಮೆಯಿದ್ದಾರೆ ಎಂದು ತಿಳಿಸಿದರು.

ಮಂಜೂರಾಗಿರುವ ಅಧ್ಯಾಪಕರುಗಳ ಹುದ್ದೆಗಳ ಸಂಖ್ಯೆ: 664. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಖಾಯಂ ಅಧ್ಯಾಪಕರುಗಳು ಸಂಖ್ಯೆ 280 ಇರಬಹುದು. ಶೇ.70 ರಷ್ಟು ಅಧ್ಯಾಪಕರುಗಳ ಹುದ್ದೆಗಳು ಖಾಲಿಯಿದೆ. ವಿಶ್ವವಿದ್ಯಾನಿಲಯವು 40/50 ವರ್ಷಗಳ ಹಿಂದೆ ಇದ್ದಂತಹ ಕೋರ್ಸ್‌ಗಳಿಗೆ ಮಾತ್ರ ಸೀಮಿತವಾಗಿಲ್ಲದೆ, ಹೊಸ ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಹೆಚ್ಚಾಗಿದೆ. ಸುಮಾರು 1,50,000 ವಿದ್ಯಾರ್ಥಿಗಳು ವ್ಯಾಸಂಗವನ್ನು ಮಾಡುತ್ತಿರುತ್ತಾರೆ. ವಿದ್ಯಾರ್ಥಿಗಳಿಗೆ ಬೋಧನಾ ಕಾರ್ಯನಿರ್ವಹಿಸಲು ಅಧ್ಯಾಪಕರುಗಳ ಅವಶ್ಯಕತೆಯಿದೆ. ಅತಿಥಿ ಉಪನ್ಯಾಸಕರುಗಳನ್ನು ಸರ್ಕಾರವೇ ಮಾಡಿಕೊಂಡಿರುವ ವ್ಯವಸ್ಥಾ ಪದ್ಧತಿಯಾಗಿದೆ. ಕಾಲೇಜು ಶಿಕ್ಷಣ ಇಲಾಖೆಯಲ್ಲಿ 10,000 ಕ್ಕಿಂತಲೂ ಹೆಚ್ಚಿನ ಅತಿಥಿ ಉಪನ್ಯಾಸಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಕುಲಪತಿಗಳು ಕಾರ್ಯಭಾರ, ಕ್ರೆಡಿಟ್ಸ್, ಸಿಬಿಎಸ್ ಪದ್ಧತಿಗಳನ್ನೆಲ್ಲಾ ಪರಿಶೀಲಿಸಿ ಅತಿಥಿ ಉಪನ್ಯಾಸಕರುಗಳನ್ನು ನೇಮಕಾತಿ ಮಾಡಿಕೊಳ್ಳುತ್ತಿದ್ದಾರೆ. ಅತಿಥಿ ಉಪನ್ಯಾಸಕರುಗಳ ನೇಮಕದಲ್ಲಿ ನಿಯಮವನ್ನು ಪಾಲಿಸಿ ನೇಮಕಾತಿ ಮಾಡಿಕೊಳ್ಳುವುದರಲ್ಲಿ ಸಮಸ್ಯೆಯಾಗುವುದಿಲ್ಲ. ಆದರೆ, ಮಂಜೂರಾದ ಹುದ್ದೆಗಳಿಗಿಂತ ಡೇಟಾ ಎಂಟ್ರಿ ಆಪರೇಟರ್, ಗ್ರೂಪ್ 'ಡಿ' ಹುದ್ದೆಗಳಲ್ಲಿ ತಾತ್ಕಾಲಿಕವಾಗಿ ಅಧ್ಯಾಪಕೇತರ ಉದ್ಯೋಗಿಗಳನ್ನು ನೇಮಕಾತಿ ಮಾಡಿರುವುದು ಕಂಡುಬಂದಿದೆ. ಅಗತ್ಯಕ್ಕಿಂತ ಹೆಚ್ಚಿನ ಉದ್ಯೋಗಿಗಳ ಅವಶ್ಯಕತೆ ಇದೆ ಎಂದು ಕಂಡುಬರುವುದಿಲ್ಲ. ಅಧ್ಯಾಪಕರುಗಳು ಹಾಗೂ ವಿದ್ಯಾರ್ಥಿಗಳಿಗೆ ನಾವು ಸ್ಕೆಲಿಟನ್ ಸ್ಟಾಫ್‌ಆಗಿ ಕೆಲಸ ಮಾಡಬೇಕಾಗುತ್ತದೆ. ವಿಶ್ವವಿದ್ಯಾನಿಲಯಕ್ಕೆ ಬರುವಂತಹ ವಿದ್ಯಾರ್ಥಿಗಳ ಪ್ರವೇಶಾತಿ ಹಾಗೂ ಪರೀಕ್ಷಾ ಶುಲ್ಕಗಳನ್ನು ಖರ್ಚು

ಮಾಡುವುದು ಸರಿಯಾದ ಕ್ರಮವಲ್ಲ ಎಂದು ತಿಳಿಸಿದರು. ಮಾನ್ಯ ಸಿಂಡಿಕೇಟ್ ಸದಸ್ಯರುಗಳು ಹಿಂದಿನ ಸಭೆಗಳಲ್ಲಿ ಹೇಳಿದಂತೆ ಬೋಧಕರುಗಳಿಗೆ ನೀಡುವಂತೆ ಮಾನವೀಯತೆ ದೃಷ್ಟಿಯಿಂದ ಬೋಧಕೇತರ ನೌಕರರಿಗೂ ನೀಡುವಂತೆ ಕೋರಿರುವುದು ಅಂದರೆ 'ಅನ್ನದೇವರ ಮುಂದೆ ಯಾವ ದೇವರು ಇಲ್ಲ, ಹಾಗೇ ದುಡಿಯೋ ಕೈಗಳಿಗೆ ಕೆಲಸ ಕೊಡಬೇಕು' ಎನ್ನುವುದು ಅವರ ಪ್ರಾಮುಖ್ಯತೆ. ವಿಶ್ವವಿದ್ಯಾನಿಲಯದ ಒಟ್ಟಾರೆ ಆದಾಯದ ಪರಿಸ್ಥಿತಿ, ಶೈಕ್ಷಣಿಕ ಬೆಳವಣಿಗೆ ಹಾಗೂ ಇತರೆ ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಗಮನವಿಡಬೇಕಾಗಿರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಈಗ ಸಭೆಯಲ್ಲಿ ನೀಡಿರುವ ಮಾಹಿತಿಯು ಅಪೂರ್ಣವಾಗಿದೆ. ಅವುಗಳೆಲ್ಲವನ್ನು ಒದಗಿಸಬೇಕೆಂದು ಹಾಗೂ ಪ್ರಸ್ತುತ ವಿಷಯದ ಬಗ್ಗೆ ನಮ್ಮ ಅಭಿಪ್ರಾಯವನ್ನು ತಿಳಿಸುವ ಮುಂಚೆ, ನೀವು ಒಬ್ಬ ಆಡಳಿತಗಾರರಾಗಿ ನೀವು ಏನು ಸಲಹೆ ನೀಡುತ್ತೀರಿ ಎಂದು ಕುಲಸಚಿವರಿಗೆ ಕೇಳಿದರು.

ಕುಲಸಚಿವರು ಮಾತನಾಡಿ, ಸದರಿ ವಿಷಯದ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡಿ, ಸಮಿತಿಯು ಸರ್ವಾನುಮತದಿಂದ ತೆಗೆದಕೊಳ್ಳುವ ನಿರ್ಣಯಕ್ಕೆ ವಿಶ್ವವಿದ್ಯಾನಿಲಯವು ಬದ್ಧವಾಗಿರಬೇಕು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ದಿನಾಂಕ : 1.06.2022 ರಂದು ತಾತ್ಕಾಲಿಕ ನೇಮಕಾತಿ ಮಾಡಿ ಅಂತಿಮವಾಗಿ ಅದೇಶ ಹೊರಡಿಸಿರುತ್ತಾರೆಂದು ತಿಳಿಸಿದ್ದೀರಿ. ಸರ್ಕಾರದಿಂದ 2020 ರಿಂದ ಸುತ್ತೋಲೆ/ಆದೇಶಗಳು ಬಂದಿದ್ದರೂ ಸಹ 2021-2022 ರವರೆಗೂ ತಾತ್ಕಾಲಿಕವಾಗಿ ನೇಮಕಾತಿ ಮಾಡಿರುವುದು ಕಂಡುಬಂದಿದೆ. ನೇಮಕಾತಿ ಮಾಡಬೇಕು ಎನ್ನುವ ಮನಸ್ಥಿತಿಯಿರುವ ಅಧಿಕಾರಿಗಳು ಇದ್ದಾಗ, ನೇಮಕಾತಿ ಮಾಡಬಾರದೆಂದು ತಿಳಿಸುವ ಸರ್ಕಾರದ ಸುತ್ತೋಲೆ/ಆದೇಶಗಳು ಬಂದರೂ ಸಹ ಕ್ರಮವಹಿಸುವುದಿಲ್ಲ. ಇದನ್ನೆಲ್ಲಾ ಗಮನಿಸಿದಾಗ 2020ರಿಂದ ಇದುವರೆವಿಗೂ ಸರ್ಕಾರದ ಸುತ್ತೋಲೆ/ಆದೇಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಪ್ರಸ್ತುತ ವಿಶ್ವವಿದ್ಯಾನಿಲಯದ ಅಧಿಕಾರಿಗಳು ವಿಶ್ವವಿದ್ಯಾನಿಲಯದಲ್ಲಿ ಸುಧಾರಣೆ ತರಲು ಕ್ರಮವಹಿಸಿದ್ದರೆ ನಾನು ಸಹಕಾರವನ್ನು ನೀಡುತ್ತೇನೆ. ಮೈಸೂರು ವಿಶ್ವವಿದ್ಯಾನಿಲಯವನ್ನು ಅಭಿವೃದ್ಧಿ ಪಥದಲ್ಲಿ ಮುಂದುವರೆಸುವುದು ನಮ್ಮ ಉದ್ದೇಶವಾಗಿದೆ. ಈ ಹಂತದಲ್ಲಿ ಅಧ್ಯಾಪಕರುಗಳು ವಿದ್ಯಾರ್ಥಿಗಳ ಹಿತರಕ್ಷಣೆ ಕಾಪಾಡಬೇಕು. ಹಾಗೆಯೇ, ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳು ಸಹ ಬೆಂಬಲ ನೀಡಬೇಕು. ಅವಶ್ಯಕತೆಗನುಗುಣವಾಗಿ ತಾತ್ಕಾಲಿಕ ಉದ್ಯೋಗಿಗಳು ಕಾರ್ಯನಿರ್ವಹಿಸುವುದು ಸೂಕ್ತವಾಗಿದೆ. ಆದರೆ, ಮಂಜೂರಾದ ಹುದ್ದೆಗಳಿಗಿಂತ ಹೆಚ್ಚಿನ ಮಟ್ಟದಲ್ಲಿ ತಾತ್ಕಾಲಿಕ ಉದ್ಯೋಗಿಗಳು ಕಾರ್ಯನಿರ್ವಹಿಸುತ್ತಿದ್ದರೆ, ವಿಶ್ವವಿದ್ಯಾನಿಲಯದ ಆರ್ಥಿಕ ಪರಿಸ್ಥಿತಿಯಿಂದ ಹಿಡಿದು ಪ್ರತಿಯೊಂದರ ಮೇಲೂ ಹೊರೆಯಾಗುತ್ತದೆ. ಈ ಹಿನ್ನೆಲೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡುವುದು ಒಳ್ಳೆಯದು. ಪ್ರತಿ ವಿಭಾಗದಿಂದಲೂ ನನಗೆ ಕೆಲವೊಂದು ಮಾಹಿತಿಗಳು ತಿಳಿದುಬಂದಿದ್ದು, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯವನ್ನು ನಿಷ್ಠೆಯಿಂದ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳು ಇದ್ದಾರೆ. ಅದರಲ್ಲಿ ಕೆಲವರು 3-6 ತಿಂಗಳವರೆಗೆ ಪೂರ್ವಾನುಮತಿ ಪಡೆಯದೇ ಅನಧಿಕೃತವಾಗಿ ಗೈರುಹಾಜರಾಗಿರುವ ಉದ್ಯೋಗಿಗಳು ಇದ್ದಾರೆ. ಅವರುಗಳಿಗೆ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸಲು ಆಸಕ್ತಿಯಿಲ್ಲದಿದ್ದಲ್ಲಿ, ಅವರುಗಳನ್ನು terminate ಮಾಡಬೇಕು. ಇನ್ನು ಕೆಲವರು ಹಾಜರಾತಿ ಪುಸ್ತಕದಲ್ಲಿ ಸಹಿ ಮಾಡಿ ಹೊರಹೋಗುವುದು, ಸಂಘಟನಾ ಸಂಸ್ಥೆಗಳಿಂದ ಬೆದರಿಕೆ ಹಾಕುವುದು. ಇವೆಲ್ಲವೂ ಕೆಲವೊಂದು ವಿಭಾಗದಲ್ಲಿ ನಡೆಯುತ್ತಿದೆ. ನಿರುದ್ಯೋಗ ಸಮಸ್ಯೆ ಒಂದು ಭಾಗವಾದರೆ, ಉದ್ಯೋಗವಿದ್ದರೂ ಕಾರ್ಯನಿರ್ವಹಿಸದೇ ಇರುವವರ ಉದ್ಯೋಗಿಗಳ

ಅವಶ್ಯಕತೆವಿರುವುದಿಲ್ಲ. ವಿಶ್ವವಿದ್ಯಾನಿಲಯದ ಎಲ್ಲಾ ಉದ್ಯೋಗಿಗಳು ನಿಷ್ಠೆಯಿಂದ ಕಾರ್ಯನಿರ್ವಹಿಸಬೇಕೆನ್ನುವುದು ನಮ್ಮ ಉದ್ದೇಶವಾಗಿದೆ.

ಮಾನ್ಯ ಅಧ್ಯಕ್ಷರ ಅನುಮತಿ ಮೇರೆಗೆ, ಮುಂದುವರೆದು ಕುಲಸಚಿವರು ಮಾತನಾಡಿ, 2020ರಲ್ಲಿ ಕೋವಿಡ್-19 ರ ಅವಧಿಯಲ್ಲಿ ಸಾರ್ವಜನಿಕರ ಆರೋಗ್ಯ ದೃಷ್ಟಿಯನ್ನು ಪರಿಗಣನೆಗೆ ತೆಗೆದುಕೊಂಡು ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಮೆಡಿಕಲ್ ಎಮರ್ಜನ್ಸಿ ಸಮಯದಲ್ಲಿ ಸರ್ಕಾರವು ಯಾವುದೇ ನೇರ ನೇಮಕಾತಿಯನ್ನು ಕೈಗೊಂಡಿರುವುದಿಲ್ಲ. ಇಂತಹ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಗ್ರೂಪ್- 'ಸಿ' ಮತ್ತು 'ಡಿ' ವೃಂದದಲ್ಲಿ ಒಟ್ಟು 364 ಮಂದಿಯನ್ನು ಒಂದು ವರ್ಷದಲ್ಲಿ ತಾತ್ಕಾಲಿಕ ನೇಮಕಾತಿಯನ್ನು ಹಾಗೂ 2021-2022ರಲ್ಲಿ ಒಟ್ಟು 10 ಮಂದಿ ತಾತ್ಕಾಲಿಕ ಮಾಡಿಕೊಂಡಿದ್ದಾರೆ ಎಂದು ಸಭೆಗೆ ತಿಳಿಸಿದರು. ಆದ್ದರಿಂದ ಸಮಿತಿ ರಚನೆಯಲ್ಲಿ ಕಾನೂನು ತಜ್ಞರನ್ನೊಳಗೊಂಡಂತೆ ಸೇವಾ ನಿಯಮಗಳ ತಜ್ಞರನ್ನು ಸೇರ್ಪಡೆಗೊಳಿಸಬೇಕು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಡಿ ತಾತ್ಕಾಲಿಕ ಬೋಧಕ/ಬೋಧಕೇತರ ಉದ್ಯೋಗಿಗಳಿಗೆ ನಿಗದಿಪಡಿಸಿರುವ ವೇತನಗಳು ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿದೆ. ಸರ್ಕಾರದ ನಿಯಮಾವಳಿ ಅಥವಾ ವಿಶ್ವವಿದ್ಯಾನಿಲಯದ ಯಾವುದಾದರೂ ನಿಯಮಾವಳಿ ಆಧಾರದ ಮೇಲೆ ವೇತನವನ್ನು ನಿಗದಿಪಡಿಸಲಾಗಿದೆಯೇ ಎಂದು ಹಾಗೂ 4, 8, 12 ಗಂಟೆಗೆ ಕಾರ್ಯನಿರ್ವಹಿಸುತ್ತಿರುವ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ನಿಗಧಿಪಡಿಸಲಾಗಿರುವ ಬಗ್ಗೆ ಮಾನದಂಡವನ್ನು ರಚಿಸಲಾಗಿದೆಯೇ ಎಂಬುದರ ಬಗೆಗಿನ ಎಲ್ಲಾ ಮಾಹಿತಿಗಳನ್ನು ಹಾಗೂ ಯಾವ ಯಾವ ವಿಷಯಗಳನ್ನು ಚರ್ಚೆ ಮಾಡಬೇಕೋ ಎಂಬುದರ ಬಗ್ಗೆ ಒಂದು ಪಟ್ಟಿಯನ್ನು ಸಿದ್ಧಪಡಿಸಬೇಕು. ಆದ್ದರಿಂದ ಇವುಗಳನ್ನೆಲ್ಲಾ ಪರಾಮರ್ಶೆ ಮಾಡಿ ಸಮಗ್ರವಾದ ವರದಿ ಸಲ್ಲಿಸುವ ಸಂಬಂಧ ಒಂದು ಸಮಿತಿ ರಚನೆ ಮಾಡುವುದು ಒಳಿತು ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಪ್ರಸ್ತುತ ವಿಷಯದ ಬಗ್ಗೆ ಒಂದು ಸಮಿತಿಯನ್ನು ರಚನೆ ಮಾಡುವುದಕ್ಕೆ ತಮ್ಮ ಸಹಮತವನ್ನು ವ್ಯಕ್ತಪಡಿಸುತ್ತಾ, ಹೊಸ ರೂಪುರೇಷೆಗಳನ್ನು ಅಳವಡಿಸಿಕೊಳ್ಳಲು ಸಹಾಯವಾಗುತ್ತದೆಂದು ಈ ಸಮಿತಿಯಲ್ಲಿ ನುರಿತ ತಜ್ಞರನ್ನೊಳಗೊಂಡ ಸಮಿತಿಯಾಗಿರಬೇಕೆಂದು ಇದರಿಂದ ವಿಶ್ವವಿದ್ಯಾನಿಲಯಕ್ಕೆ ಹೊರೆಯಾಗದ ಹಾಗೆ ಅನುಕೂಲವಾಗುವ ರೀತಿಯಲ್ಲಿ ಸರ್ಕಾರದ ನಿಯಮಾವಳಿಯನ್ನು ಪಾಲಿಸುವ ನಿಟ್ಟಿನಲ್ಲಿ ಆಗಬೇಕು ಎಂದು ಸರ್ಕಾರದ ಆದೇಶವನ್ನು ಎತ್ತಿಹಿಡಿಯಬೇಕು ಜೊತೆಗೆ ಆದೇಶವನ್ನು ಗಮನದಲ್ಲಿಟ್ಟುಕೊಂಡು ತಜ್ಞರ ಸಮಿತಿಯನ್ನು ರಚನೆ ಮಾಡಬೇಕೆಂದು, ಆ ಸಮಿತಿಯ ವರದಿಯನ್ನು ಸಿಂಡಿಕೇಟ್ ಸಭೆಯಲ್ಲಿಟ್ಟು ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಳ್ಳಬಹುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಈ ತಜ್ಞರ ಸಮಿತಿಯಲ್ಲಿ 2-3 ಕಾನೂನು ತಜ್ಞರನ್ನು ಸೇರ್ಪಡೆಗೊಳಿಸಬೇಕೆಂದು ತಿಳಿಸಿದರು. ನಾವು ಯಾವುದೋ ಸಮಿತಿಯನ್ನು ರಚನೆ ಮಾಡಿ ಅಲ್ಲಿನ ವರದಿಯನ್ನು ಸಿಂಡಿಕೇಟ್‌ಗೆ ತಂದು ಆದೇಶವಾದ ನಂತರ ಯಾರಾದರೂ ಉದ್ಯೋಗಿಗಳು ಮತ್ತೆ ನ್ಯಾಯಾಲಯಕ್ಕೆ ಹೋಗಿ ಸ್ಟೇ ತರುವುದರ ಮುಖಾಂತರ ಕೋರ್ಟ್ ಅವರ ಪರವಾಗಿ ನಿಲ್ಲುವಂತಾಗುತ್ತದೆ. ಆದ್ದರಿಂದ ಕಾನೂನು ತಜ್ಞರ ಅಭಿಪ್ರಾಯವನ್ನು ಪಡೆಯುವಂತೆಯೂ ತಿಳಿಸಿದರು. ಆದ್ದರಿಂದ ಯಾರೇ ನ್ಯಾಯಾಲಯಕ್ಕೆ ಹೋದಂತಹ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯವು ಅನುಸರಿಸುವ ಎಲ್ಲಾ ಮಾನದಂಡಗಳು ಸರಿಯಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುವಂತಹ ನಿಟ್ಟಿನಲ್ಲಿ ಸಮಿತಿಯನ್ನು ರಚಿಸಬೇಕೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಬೋಧಕ ಸಿಬ್ಬಂದಿಯಲ್ಲೂ 4-8-12 ಗಂಟೆಯಂತೆ ವೇತನ ನಿಗದಿಪಡಿಸಲಾಗಿದೆ. ವಾರದಲ್ಲಿ 4 ಗಂಟೆ ಬೋಧನಾ ಕಾರ್ಯಭಾರ ಹೊಂದಿರುವವರಿಗೆ ರೂ.8,000/- ವೇತನ ನಿಗದಿಪಡಿಸಲಾಗಿದೆ. ಇದಕ್ಕೆ ಕಾರ್ಮಿಕ ಕಾಯ್ದೆಯಲ್ಲೂ ಅವಕಾಶವಿಲ್ಲ. ಅವಿದ್ಯಾವಂತರಿಗೂ ರೂ.8,000/- ಗಳನ್ನು ನೀಡಲು ಬರುವುದಿಲ್ಲ. ಅಂತಹದರಲ್ಲಿ ಪಿಹೆಚ್.ಡಿ ಪದವಿ ಪಡೆದವರಿಗೆ ರೂ.8,000/-ಗಳ ವೇತನ ನೀಡುವುದು ಸರಿಯಲ್ಲ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಬೋಧಕರಿಗೆ ವಾರಕ್ಕೆ 4 ಗಂಟೆಗಳ ಬೋಧನಾ ಕಾರ್ಯಭಾರಕ್ಕೆ ಸಂಬಂಧಿಸಿದಂತೆ, ಆಯಾಯ ವಿಷಯಕ್ಕೆ ತಜ್ಞರ ಅವಶ್ಯಕತೆ ಇರುವಾಗ ತಜ್ಞರನ್ನು ಆಹ್ವಾನಿಸುವ ಉದ್ದೇಶದಿಂದ 4 ಗಂಟೆಗಳನ್ನು ನಿಗದಿಪಡಿಸಲಾಯಿತು. ಉದಾಹರಣೆಗೆ ಎಂಬಿಎಗೆ ಸಂಬಂಧಪಟ್ಟಂತೆ ಕಂಪನಿಯವರು ಬಂದಾಗ ಆ ಕಂಪನಿಯ ಎಕ್ಸ್‌ಪರ್ಟ್‌ಗಳು ಬಂದಾಗ ಅಂತಹವರಿಗೆ 4 ಗಂಟೆಗಳನ್ನು ನೀಡಲಾಗುತ್ತಿತ್ತು. ಅತಿಥಿ ಉಪನ್ಯಾಸಕರುಗಳ ಸಂಖ್ಯೆ ಹೆಚ್ಚಾದ್ದರಿಂದ ವಿಶೇಷ ಸಂದರ್ಭವೆಂದು 4 ಗಂಟೆಗಳನ್ನು ನೀಡಲಾಗಿದೆ. ಬದಲು 8 ಮತ್ತು 12 ಗಂಟೆಗಳೆಂದು ನಿಗದಿಪಡಿಸಲಾಯಿತು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಅವರು ಮಾತನಾಡಿ, ಎಲ್ಲಾ ವಿಷಯಗಳಗೂ ಅತಿಥಿ ಉಪನ್ಯಾಸಕರು ಅಗತ್ಯವಿರುವುದಿಲ್ಲ. ಭೌತವಿಜ್ಞಾನ ಬೋಧನೆ ಮಾಡುವವರು ಇನ್ನೊಂದು ಪತ್ರಿಕೆಯನ್ನು ಬೋಧನೆ ಮಾಡುವಂತಹವರಾಗಿರಬೇಕು. ಅಂತಹ ಸಂದರ್ಭದಲ್ಲಿ 4 ಗಂಟೆಗಳಿಗೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡುವುದು ತಪ್ಪುತ್ತದೆ. ತಾತ್ಕಾಲಿಕ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧ (Rationalize) ಗೊಳಿಸುವ ಸಂದರ್ಭದಲ್ಲಿ ಮೊದಲು ಮಂಜೂರಾದ ಹುದ್ದೆಗಳನ್ನು ಗಮನದಲ್ಲಿಟ್ಟುಕೊಂಡು ಕ್ರಮವಹಿಸಬೇಕೆಂದರು.

ಮಾನ್ಯ ಕುಲಪತಿಗಳು ಮಾತನಾಡಿ, ಇತ್ತೀಚೆಗೆ ನಾನು ಸುಮಾರು ವಿಭಾಗಗಳಿಗೆ ಅನಿರೀಕ್ಷಿತವಾಗಿ ಭೇಟಿ ನೀಡಿದ್ದೇನೆ. ಆಗ ಗಮನಿಸಿರುವುದೇನೆಂದರೆ, ಅಧ್ಯಾಪಕೇತರ ಉದ್ಯೋಗಿಗಳ ಸಂಖ್ಯೆ ಅಗತ್ಯಕ್ಕಿಂತ ಹೆಚ್ಚಾಗಿರುತ್ತದೆ. ಅದರಲ್ಲೂ 50% ಉದ್ಯೋಗಿಗಳು ನಿಗದಿತ ಅವಧಿಯಲ್ಲಿ ಉಪಸ್ಥಿತರಿರುವುದಿಲ್ಲ. ಈ ಬಗ್ಗೆ ಕುಲಪತಿಯವರಾಗಲೀ, ಕುಲಸಚಿವರಾಗಲೀ ಕಡತಗಳನ್ನು clear ಮಾಡುವುದನ್ನು ಬಿಟ್ಟು ಪದೇ ಪದೇ ವಿಭಾಗಗಳಿಗೆ ಭೇಟಿ ನೀಡುವುದಕ್ಕಾಗುವುದಿಲ್ಲ. ವಿಭಾಗಗಳ ಯಾವುದೇ ಸಮಸ್ಯೆಗಳಿಗೂ ಕುಲಪತಿಗಳು ಹಾಗೂ ಕುಲಸಚಿವರನ್ನು ಗುರಿ ಮಾಡುತ್ತಾರೆಂದು ಸಭೆಯಲ್ಲಿ ಪ್ರಸ್ತಾಪಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ಆಯಾ ವಿಭಾಗದ ಮುಖ್ಯಸ್ಥರುಗಳು ಕಛೇರಿಯ ಅವಧಿಯಲ್ಲಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಬೇಕು. ಇಲ್ಲವಾದಲ್ಲಿ, ಭಾವಚಿತ್ರವುಳ್ಳ ಬಯೋಮೆಟ್ರಿಕ್ ಅಳವಡಿಸಿ, ನಾಲ್ಕು ಬಾರಿ ಬಯೋಮೆಟ್ರಿಕ್ ಮಾಡುವುದನ್ನು ಜಾರಿಗೊಳಿಸಬೇಕು. ಅಂದರೆ ಬೆಳಗ್ಗೆ 10.00 ಗಂಟೆಗೆ, ಅಪರಾಹ್ನ 1.30 ಗಂಟೆಗೆ, ಅಪರಾಹ್ನ 2.30 ಗಂಟೆಗೆ ಮತ್ತು ಸಂಜೆ 5.30 ಗಂಟೆಗೆ ಬಯೋಮೆಟ್ರಿಕ್ ಮಾಡುವಂತೆ ಕಡ್ಡಾಯಗೊಳಿಸಬೇಕು. ಆಗ ಶೇ.75 ರಷ್ಟು ಸುಧಾರಣೆಯಾಗುತ್ತದೆ. ಸರ್ಕಾರವು ತಾತ್ಕಾಲಿಕ ಉದ್ಯೋಗಿಗಳ ನೇಮಕಾತಿಗಳಿಗೆ ಕುಲಪತಿಗಳು, ಕುಲಸಚಿವರು ಮತ್ತು ಹಣಕಾಸು ಅಧಿಕಾರಿಗಳನ್ನು ಹೇಗೆ ಹೊಣೆಗಾರರನ್ನಾಗಿ ಮಾಡಿದ್ದಾರೆಯೋ, ಅದೇ ರೀತಿ ವಿಭಾಗದಲ್ಲಿ ಏನೇ ಸಮಸ್ಯೆಗಳುಂಟಾದರು ಆಯಾ ವಿಭಾಗದ ಮುಖ್ಯಸ್ಥರನ್ನು ಹೊಣೆಗಾರರನ್ನಾಗಿ ಮಾಡಿ ಸುತ್ತೋಲೆ

ಹೊರಡಿಸಬೇಕು ಎಂದು ತಿಳಿಸಿದರು. ನಮ್ಮಲ್ಲಿರುವ ಸೆಕ್ಯುರಿಟಿ ಸಿಬ್ಬಂದಿಗಳಿಗೆ ನಿರ್ದೇಶನ ಕೊಡಬೇಕು. ಆಗ ನಮ್ಮ ಸಂಸ್ಥೆ secured ಆಗಿರುತ್ತದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ಪ್ರಸ್ತುತ 19 ಮಂದಿ ತಾತ್ಕಾಲಿಕ ಉದ್ಯೋಗಿಗಳು ಆರು ತಿಂಗಳುಗಳಿಂದಲೂ ಕಛೇರಿಗೆ ಅನಧಿಕೃತವಾಗಿ ಗೈರುಹಾಜರಾಗಿರುತ್ತಾರೆ. ಈ 19 ಮಂದಿ ತಾತ್ಕಾಲಿಕ ಉದ್ಯೋಗಿಗಳಿಗೆ ಮರು ನೇಮಕಾತಿ ಆದೇಶ ನೀಡಬಾರದಾಗಿ ಸಭೆಯ ಗಮನಕ್ಕೆ ತಂದರು.

ಮಾನ್ಯ ಕುಲಪತಿಗಳು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯವು secured ಆಗಿದೆ. ನೀವು ಹೇಳಿದಂತೆ ಕೆಲವೊಂದು ಮಾರ್ಗದರ್ಶನಗಳನ್ನು ಅಳವಡಿಸಿಕೊಳ್ಳಬೇಕಾಗಿದೆ. ಸಿಬ್ಬಂದಿಗಳಿಗೆ ಗುರುತಿನ ಚೀಟಿ ನೀಡಬೇಕು, ಕೆಲವೊಂದು ಮಾನದಂಡಗಳನ್ನು ತರಬೇಕು. ನಾನು ಹಲವಾರು ಬಾರಿ ವಿಭಾಗಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಶೇ. 20 ರಿಂದ ಶೇ. 30 ರಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ. ಆದ್ದರಿಂದ ಬಯೊಮೆಟ್ರಿಕ್‌ಅನ್ನು ಅಳವಡಿಸುವುದು ಒಳಿತು ಎಂದು ಅಭಿಪ್ರಾಯಿಸಿದರು.

ಕುಲಸಚಿವರು ಮಾತನಾಡಿ ಬಹಳಷ್ಟು ತಾತ್ಕಾಲಿಕ ಸಿಬ್ಬಂದಿಗಳು ಉತ್ತಮ ಕಾರ್ಯನಿರ್ವಹಿಸುವವರು ಇದ್ದಾರೆ, ಅವರ ಸೇವೆಯನ್ನು ಪರಿಗಣಿಸಬೇಕೆಂದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಬಯೋಮೆಟ್ರಿಕ್ ಹಾಗೂ ಚಲನವಲನ ಪ್ರಸ್ತಕವನ್ನು ಇಡಬೇಕು. ಬಯೋಮೆಟ್ರಿಕ್ ಮೇಲೆ ಸಿಸಿ ಕ್ಯಾಮರ್‌ವನ್ನು ಅಳವಡಿಸಬೇಕು ಎಂದು ತಿಳಿಸಿದರು. ಬಯೋಮೆಟ್ರಿಕ್‌ನ್ನು ವಿಭಾಗದ ಮುಖ್ಯಸ್ಥರ ಮುಂದೆ ಅಳವಡಿಸುವುದು ಸೂಕ್ತ ಎಂದರು.

ಹಣಕಾಸು ಅಧಿಕಾರಿವರು ಮಾತನಾಡಿ ತಮ್ಮ ಕೊಠಡಿಯಲ್ಲಿ ಸಿಸಿ.ಕ್ಯಾಮರ್ ಹಾಗೂ ಬಯೋಮೆಟ್ರಿಕ್‌ನ್ನು ಅಳವಡಿಸಲಾಗಿದೆ. ಬೇರೆ ಅಧಿಕಾರಿಗಳ ಕೊಠಡಿಯಲ್ಲಿ ಸಿಸಿ ಕ್ಯಾಮರ ಇರುವುದಿಲ್ಲ ಎಂದು ಹೇಳಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಸಾಫ್ಟ್‌ವೇರ್ ಕಂಪನಿಗಳಲ್ಲಿ ಯಾವ ನಿಯಮ ಇದೆ ಅದನ್ನು ನಮ್ಮ ವಿಶ್ವವಿದ್ಯಾನಿಲಯದಲ್ಲಿ ಕಟ್ಟುನಿಟ್ಟಾಗಿ ಅಳವಡಿಸಿಕೊಳ್ಳುವುದು ಸೂಕ್ತ ಎಂದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಸಾಫ್ಟ್‌ವೇರ್ ಕಂಪನಿಗಳ ನಿಯಮವನ್ನು ಅಳವಡಿಸಿದರೆ ದೂರವಾಣಿ ಕರೆಗಳು ಹೆಚ್ಚಾಗಿ ಬರುವ ಸಂಭವವಿರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಕರೆಗಳು ಬರುತ್ತವೆ ಎಂದು ನಿರ್ಲಕ್ಷಿಸುವುದಕ್ಕೆ ಸಾಧ್ಯವಿಲ್ಲ. ಬಯೊಮೆಟ್ರಿಕ್ ಹಾಗೂ ಚಲನವಲನ ಪುಸ್ತಕವನ್ನು ಇಡುವುದರ ಬಗ್ಗೆ ಕ್ರಮಕೈಗೊಳ್ಳುವುದು. ಜೊತೆಗೆ ಈ ವಿಷಯವು ಇಲಾಖೆಗಳ ಮುಖ್ಯಸ್ಥರ ನಿಯಂತ್ರಣ ಇರಬೇಕು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ, ದಿನಾಂಕ: 29-12-2023ರ ಮಾನ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರದಿಂದ ಹೊರಡಿಸಿರುವ ಸುತ್ತೋಲೆಯನ್ನು ಸಭೆಗೆ ಮಂಡಿಸಿದರು. ಆರ್ಥಿಕ ಇಲಾಖೆಯ ಸಹಮತಿ ಇಲ್ಲದೆ ಹೊಸದಾಗಿ ಸೃಜಿಸಿರುವ ಹುದ್ದೆಗಳನ್ನು ಮಂಜೂರಾದ ಹುದ್ದೆಗಳೆಂದು ಪರಿಗಣಿಸಲಾಗುವುದಿಲ್ಲವೆಂದು ಹಾಗೂ ಸದರಿ ಹುದ್ದೆಗಳ ಭರ್ತಿಗೆ ಸಹಮತಿ ನೀಡಲಾಗುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಿರುವ ಸುತ್ತೋಲೆಯನ್ನು ಸಭೆಗೆ ಪ್ರಸ್ತುತ ಪಡಿಸಿದರು. ಈ ವಿಷಯವು ಎಲ್ಲಾ ವಿಶ್ವವಿದ್ಯಾನಿಲಯಗಳಿಗೆ ಸಂಬಂಧಿಸಿದ್ದಾಗಿದೆ. ಅದರಲ್ಲಿ ವೈದ್ಯಕೀಯ ವಿಶ್ವವಿದ್ಯಾಲಯ, ಕೃಷಿ ವಿಶ್ವವಿದ್ಯಾಲಯ ಹಾಗೂ ಇತರೆ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ

ಸಂಬಂಧಿಸಿದ್ದಾಗಿದೆ. ಆದ್ದರಿಂದ ಈ ಸುತ್ತೋಲೆಯನ್ನು ಸಿಂಡಿಕೇಟ್ ಸದಸ್ಯರೆಲ್ಲರೂ ಗಮನಿಸಬೇಕೆಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಇತ್ತೀಚಿಗೆ Public Accounts Committee ಸಭೆಗೆ ಹೋದಾಗ ಬೇರೆ ವಿಶ್ವವಿದ್ಯಾನಿಲಯದಲ್ಲಿ ಹುದ್ದೆಗಳನ್ನು ಸೃಜಿಸಿರುವುದರಿಂದ ಈ ಸುತ್ತೋಲೆ ಹೊರಡಿಸಿರುತ್ತಾರೆಂದು ತಿಳಿಸಿದರು.

ಶೀ ಗೋಕುಲ್ ಗೋವರ್ಧನ್ ಮಾತನಾಡಿ ಇದೇ ರೀತಿ ಆಗುತ್ತಾ ಇದ್ದರೆ ವಿಶ್ವವಿದ್ಯಾನಿಲಯದ ಕಾಯ್ದೆಗೆ ತಿದ್ದುಪಡಿ (Amendment) ಮಾಡಿ ಬಿಡುವ ಸಂಭವವಿದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ನಡೆಸುತ್ತಿದ್ದ ಕೆ.ಸೆಟ್ ಪರೀಕ್ಷೆಯನ್ನು ಕೆ.ಇ.ಎ.ಯವರಿಗೆ ವಹಿಸಲಾಗಿದೆ. ಇದೇ ರೀತಿಯಾದರೆ ಪಿಎಚ್.ಡಿ ಪ್ರವೇಶ ಪರೀಕ್ಷೆಯನ್ನು ಕೂಡ ಕೆ.ಇ.ಎ ಮುಖಾಂತರ ನಡೆಸುವ ಸಂಭವವವಿರುತ್ತದೆ ಎಂದು ತಿಳಿಸಿದರು. ಹಾಗೆಯೇ ಅಂತಿಮವಾಗಿ ಮೈಸೂರು ವಿಶ್ವವಿದ್ಯಾನಿಲಯವು ಮಾಡುತ್ತಿದ್ದ ಕಾರ್ಯವೆಲ್ಲವನ್ನು ಸರ್ಕಾರವೇ ವಹಿಸಿಕೊಳ್ಳುವ ಸಾಧ್ಯತೆ ಎಂದು ತಿಳಿಸಿದರು. ಸ್ವಾಯತ್ತತೆ ಎಂಬುದು ಇರುವುದಿಲ್ಲ. ಸರ್ಕಾರವು ಸ್ವಾಯತ್ತತೆಯನ್ನು ನೀಡಿದ್ದರಿಂದ ಹುದ್ದೆಗಳನ್ನು ಸೃಜಿಸಿ, ನೇಮಕಾತಿ ಮಾಡಲಾಗಿದೆ, ವಿಶ್ವವಿದ್ಯಾನಿಲಯದ ಶ್ರೇಯೋಭಿವೃದ್ಧಿಗೆ ಬೇಕಾದಂತಹ ಕೆಲಸಗಳನ್ನು ಮಾಡದೆ, ನಮಗೆ ಬೇಕೋ ಬೇಡವೋ ಗೊತ್ತಿಲ್ಲ ವಿಶ್ವವಿದ್ಯಾನಿಲಯದ ಸಮತೋಲನ ಕಾಯ್ದುಕೊಳ್ಳದೆ ಹಾಗೂ ನಾವು ಕೈಗೊಂಡ ಕ್ರಮದಿಂದ ವಿಶ್ವವಿದ್ಯಾನಿಲಯದಲ್ಲಿ ಐದು-ಹತ್ತು ವರ್ಷಗಳಲ್ಲಿ ಕ್ರಮದಿಂದ ವಿಶ್ವವಿದ್ಯಾನಿಲಯಕ್ಕೆ ಒಳಿತಾಗುತ್ತದೆಯೋ ಇಲ್ಲವೋ ಎಂಬ ವಿಚಾರ ಮಾಡದೆ ಖರ್ಚು ಜಾಸ್ತಿಯಾಗಿರುತ್ತದೆ. ಆಗ ನಮ್ಮಲ್ಲಿ ಆರ್ಥಿಕವಾಗಿ ಸಬಲವಾಗಿದ್ದರಿಂದ ನಮಗೆ ಯಾವ ತೊಂದರೆಯು ಕಾಣಿಸಲಿಲ್ಲ. ಆದರೆ ಈಗ ನಮಗೆ ಆರ್ಥಿಕವಾಗಿ ಬಿಕ್ಕಟ್ಟು ಕಾಣುತ್ತಿರುವುದರಿಂದ ಕಷ್ಟದಾಯಕವಾಗಿದೆ ಎಂದು ತಿಳಿಸಿದರು. ಆದಾಯ ಹೆಚ್ಚಿದ್ದಲ್ಲಿ ಕೆಲಸಕಾರ್ಯಗಳು ಸರಾಗವಾಗಿ ಸಾಗುತ್ತದೆ. ನಮಗೆ ಮೊದಲು ಪೂರ್ಣಪ್ರಮಾಣದ ಅಧ್ಯಾಪಕರು ಇದ್ದರು, ಹಾಗಾಗಿ ನಮಗೆ ಹೆಚ್ಚಿನ ತೊಂದರೆ ಆಗುತ್ತಿರಲಿಲ್ಲ. ಇತ್ತೀಚೆಗೆ ಅಧ್ಯಾಪಕರು ನಿವೃತ್ತಿ ಹೊಂದುತ್ತಿರುವುದರಿಂದ ಅಧ್ಯಾಪಕರ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಕಳೆದ ನಾಲ್ಕು ವರ್ಷದ ಅವಧಿಯಲ್ಲಿ 400ಕ್ಕೂ ಹೆಚ್ಚು ತಾತ್ಕಾಲಿಕ ಸಿಬ್ಬಂದಿಗಳನ್ನು ನೇಮಕ ಮಾಡಲಾಗಿದೆ. ಇದಕ್ಕೆ ಸಂಬಂಧಿಸಿದ ಕಡತಗಳನ್ನು ಸಭೆಯಲ್ಲಿ ಇರುವುದಾಗಿ ತಿಳಿಸಿದರು. 1992-93 ರಿಂದ ನೋಡಿದರೆ ಇಬ್ಬರು ತಾತ್ಕಾಲಿಕ ನೌಕರರು, 1994 ರಲ್ಲಿ ಒಬ್ಬರು ತಾಂತ್ರಿಕದವರನ್ನು ಅಗತ್ಯಕ್ಕೆ ತಕ್ಕಂತೆ ನೇಮಕ ಮಾಡಲಾಗಿದೆ. ಆದರೆ ತಾತ್ಕಾಲಿಕ ನೇಮಕಾತಿಯನ್ನು 2010-11 ರಿಂದ 10 ರಿಂದ 12 ತಾತ್ಕಾಲಿಕ ಸಿಬ್ಬಂದಿ ನೇಮಕವಾಗಿದೆ. 2013 ರಲ್ಲಿ 22 ಸಿಬ್ಬಂದಿ 2014 ರಲ್ಲಿ 20 ಮಂದಿ ತಾತ್ಕಾಲಿಕ ಸಿಬ್ಬಂದಿಗಳ ನೇಮಕಾತಿಯಾಗಿದೆ. 2017ರಲ್ಲಿ 18 ನೇಮಕಾತಿ 2018-19ರಲ್ಲಿ ಬಹಳ ಕಡಿಮೆ ಸಿಬ್ಬಂದಿಗಳನ್ನು ನೇಮಿಸಿಕೊಂಡಿದ್ದಾರೆ. 2020ರ ನಂತರ ಪ್ರತಿ ವರ್ಷ ತಾತ್ಕಾಲಿಕ ನೌಕರರ ಸಂಖ್ಯೆಗಳು ಹೆಚ್ಚಾಗುತ್ತಾ ಹೋಗಿದೆ. ಸರ್ಕಾರದಿಂದ ಪತ್ರ ಬಂದರೆ ನೇಮಕಾತಿ ಸಂದರ್ಭದಲ್ಲಿ ಇದ್ದಂತಹ ಕುಲಪತಿಗಳು ಮತ್ತು ಕುಲಸಚಿವರ ಹೆಸರನ್ನು ನಮೂದಿಸಿ ಸರ್ಕಾರಕ್ಕೆ ಪತ್ರ ಬರೆಯುವುದಾಗಿ ಸಭೆಯ ಗಮನಕ್ಕೆ ತಂದರು. ತಾತ್ಕಾಲಿಕ ಸಿಬ್ಬಂದಿಗಳನ್ನು ತೆಗೆದು ಹಾಕಿದರೆ ಕೋರ್ಟಿಗೆ ಹೋಗುವ ಸಂಭವವಿರುತ್ತದೆ ಎಂದು ತಿಳಿಸಿದರು.

ಡಾ. ಟಿ.ಆರ್ ಚಂದ್ರಶೇಖರ್ ಅವರು ಮಾತನಾಡಿ, ಮಂಡ್ಯ, ಚಾಮರಾಜನಗರ, ಹಾಸನವನ್ನು ಹೊರತುಪಡಿಸಿ ಎಂದು ತಿಳಿಸಿದ್ದೀರಿ. ಆದರೆ ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ತಾಂತ್ರಿಕ ತೊಂದರೆ

ತುಂಬಾ ಇದೆ, ಅವರುಗಳ ಬೇಡಿಕೆಯು ಇದೆ. ಎಲ್ಲರೂ ಹೊರಗಡೆ ನಿಂತಿದ್ದಾರೆ. ನಾವು ಈಗಾಗಲೇ ವಿದ್ಯಾರ್ಥಿಗಳಿಂದ ಪ್ರವೇಶಾತಿ ಶುಲ್ಕವನ್ನು ಪಡೆದಿದ್ದೇವೆ. ಆದ್ದರಿಂದ ವಿದ್ಯಾರ್ಥಿಗಳಿಗೆ ನಾವು ಭೋದಕ ಭೋದಕೇತರರ ವ್ಯವಸ್ಥೆಯನ್ನು ಮಾಡಿಕೊಡುವುದು ನಮ್ಮ ಜವಾಬ್ದಾರಿ ಆಗಿರುತ್ತದೆ. ಉದಾಹರಣೆಗೆ ಮಂಡ್ಯದಲ್ಲಿ ಗ್ರಂಥಾಲಯದ ಸಮೇತ ಬೀಗ ಹಾಕಿರುತ್ತಾರೆ. ಆದ್ದರಿಂದ ಈ ಒಂದು ವರ್ಷದ ಮಟ್ಟಿಗೆ ಏನಾದರೂ ಮಾಡಲಿಕ್ಕೆ ಸಾಧ್ಯನಾ ಎಂದು ಪ್ರಶ್ನಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಈಗಾಗಲೇ ಮಂಡ್ಯ ವಿಶ್ವವಿದ್ಯಾನಿಲಯದಲ್ಲಿ ಸಂಯೋಜನೆಯನ್ನು (affiliation) ಆ ವಿಶ್ವವಿದ್ಯಾನಿಲಯದಿಂದ ನಡೆದಿದ್ದು, ಹಾಗೂ ಪ್ರಥಮ ವರ್ಷದ ಪ್ರವೇಶಾತಿ ಶುಲ್ಕದ ಹಣವು ಅವರಲ್ಲೇ ಇರುವುದರಿಂದ ಅವರ ಬಳಿ ಹಣದ ಕೊರತೆಯಿಲ್ಲವೆಂದು, ಹಾಗೂ ಸರ್ಕಾರ ಖರ್ಚು ಮಾಡಲು ಆದೇಶವನ್ನು ನೀಡಬೇಕು ಎಂದು ತಿಳಿಸಿದರು.

ಕುಲಸಚಿವರು ಮಾತನಾಡಿ ಕರ್ನಾಟಕ ರಾಜ್ಯ ಸರ್ಕಾರದಿಂದ 5.11.2022ರಂದು ನೂತನ ವಿಶ್ವವಿದ್ಯಾಲಯಗಳನ್ನು ವಿಭಜಿಸುವ ಸಂಬಂಧ ಹೊರಡಿಸಿರುವ ಆದೇಶದಲ್ಲಿ ಪುಟ ಸಂಖ್ಯೆ 49 ಕ್ರ.ಸಂ. 4 ಮತ್ತು 5ನ್ನು ಸಭೆಗೆ ಮಂಡಿಸಿ, ಈಗಾಗಲೇ ಸರ್ಕಾರದ ಆದೇಶದ ಪ್ರಕಾರ ಕ್ರಮಕೈಗೊಂಡಿರುವುದಾಗಿಯೂ ಹಾಗೂ ಖಾಯಂ ಅಧ್ಯಾಪಕರರಿಗೆ ವೇತನವು ಎಚ್.ಆರ್.ಎಂ.ಎಸ್ ನಿಂದ ಬರುತ್ತದೆ ಎಂದು ಸಭೆಗೆ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ತಾತ್ಕಾಲಿಕ ನೌಕರರುಗಳು ಲ್ಯಾಬ್‌ನಲ್ಲಿ ಕರ್ತವ್ಯ ನಿರ್ವಹಿಸಬೇಕಾದರೆ ಲ್ಯಾಬ್‌ನ್ನು ಸ್ವಚ್ಛಗೊಳಿಸಲು, ಲ್ಯಾಬ್‌ನ ನಿರ್ವಹಣೆಯನ್ನು ಹಾಗೂ ಅಧ್ಯಾಪಕರಗಳಿಗೆ ಬೇಕಾದಂತಹ ಸಹಾಯವನ್ನು ಮಾಡುತ್ತೇವೆ. ಆದರೆ ಅಧ್ಯಾಪಕರುಗಳಿಗೆ ವೇತನವನ್ನು ನೀಡುತ್ತೀರ. ನಮಗೆ ಏಕೆ ವೇತನವನ್ನು ನೀಡುವುದಿಲ್ಲ ಎಂಬುದಾಗಿ ಪ್ರಶ್ನಿಸುವುದನ್ನು ಸಭೆಗೆ ತಿಳಿಸಿದರು. ಈ ಒಂದು ವರ್ಷ ಏನಾದರೂ ಸಂಬಳ ಕೊಡುವ ವ್ಯವಸ್ಥೆ ಮಾಡಲು ಸಾಧ್ಯವೇ? ಎಂದು ಮನವಿ ಮಾಡಿದರು.

ಮಾನ್ಯ ಕುಲಪತಿಯವರು ಮಾತನಾಡಿ ಪ್ರಥಮ ವರ್ಷದ affiliation ಹಾಗೂ ಶುಲ್ಕದ ಹಣ ಅವರ ಬಳಿಯೇ ಇರುವುದು. ಈ ವರ್ಷದಲ್ಲಿ ಪ್ರವೇಶಾತಿಯನ್ನು ಪಡೆದಿರುವ ವಿದ್ಯಾರ್ಥಿಗಳ ಜವಾಬ್ದಾರಿ ನಮ್ಮದೇ ಆಗಿರುವುದರಿಂದಲೂ ಮತ್ತು ಶೈಕ್ಷಣಿಕವಾಗಿ ವಿದ್ಯಾರ್ಥಿಗಳಿಗೆ ಯಾವುದೇ ತೊಂದರೆಯಾಗಬಾರದೆಂಬ ಕಾರಣಕ್ಕೆ ಅಧ್ಯಾಪಕರುಗಳನ್ನು ನೀಡಿದ್ದೇವೆ. ತಾತ್ಕಾಲಿಕ ನೌಕರರುಗಳಿಗೆ ಮೈಸೂರು ವಿಶ್ವವಿದ್ಯಾನಿಲಯದಿಂದ ವೇತನವನ್ನು ಭರಿಸಿದರೆ ಲೆಕ್ಕಪರಿಶೋಧಕರು ಆಕ್ಷೇಪಣೆ ಮಾಡುತ್ತಾರೆ ಎಂದು ತಿಳಿಸಿದರು. ಸರ್ಕಾರವು ವಿಭಜನೆಗೊಂಡಿರುವ ವಿಶ್ವವಿದ್ಯಾನಿಲಯಗಳನ್ನು ಮಾತೃ ವಿಶ್ವವಿದ್ಯಾನಿಲಯಕ್ಕೆ ಹಿಂದಿರುಗಿಸುವ ಸಾಧ್ಯತೆ ಇರುವುದರಿಂದ ನಾವು ಮುಂದೆ ತಾತ್ಕಾಲಿಕ ನೌಕರರುಗಳ ವೇತನದ ವ್ಯವಸ್ಥೆಯನ್ನು ಮಾಡಬಹುದೆಂದು, ಹಾಗೂ ಈ ವಿಷಯವಾಗಿ ಸರ್ಕಾರಕ್ಕೆ ಎರಡು-ಮೂರು ಪತ್ರಗಳನ್ನು ಬರೆದಿದ್ದೇವೆ. ಸರ್ಕಾರದಿಂದ ಯಾವುದೇ ಮಾಹಿತಿಯು ನಮಗೆ ದೊರಕಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಯಾವ ರೀತಿ ಕ್ರಮಕೈಗೊಳ್ಳಲು ಸಾಧ್ಯವಾಗುತ್ತದೆ. ಸರ್ಕಾರದಿಂದ ಏನಾದರೂ ಮಾರ್ಗದರ್ಶನ ಅಥವಾ ಆದೇಶ ಬಂದಲ್ಲಿ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಹಾಗೂ ಶ್ರೀ ಗೋಕುಲ್ ಗೋವರ್ಧನ್ ಅವರು ಮಾನವೀಯತೆ ದೃಷ್ಟಿಯಿಂದ ತಾತ್ಕಾಲಿಕ ನೌಕರರುಗಳಿಗೆ ವೇತನವನ್ನು ನೀಡಲು ಸೂಕ್ತ ಕ್ರಮಕೈಗೊಳ್ಳುವಂತೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಈಗ ಎರಡನೇ ವರ್ಷದ ವಿದ್ಯಾರ್ಥಿಗಳಿಂದ ಶುಲ್ಕ ವಸೂಲಿ ಮಾಡುವುದರಿಂದ ಭೋದಕ ವರ್ಗದವರಿಗೆ ಷರತ್ತಿಗೊಳಪಟ್ಟು ಈ ವರ್ಷ ಅವರಿಗೆ ವೇತನವನ್ನು ನೀಡುತ್ತಿದ್ದೇವೆ. ಆದರೆ ಭೋದಕೇತರ ಸಿಬ್ಬಂದಿಗಳು ಪ್ರಥಮ ವರ್ಷ ಅಥವಾ ಎರಡನೇ ವರ್ಷಗಳಿಗೆ ಎಂದು ಕೆಲಸ ನಿರ್ವಹಿಸುತ್ತಿಲ್ಲ. ಅವರುಗಳು ಎರಡು ವರ್ಷಗಳಿಗೂ ಅನ್ವಯಿಸುವಂತೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಪ್ರಥಮ ವರ್ಷದ ಶುಲ್ಕ ಹಾಸನ, ಚಾಮರಾಜನಗರ, ಮಂಡ್ಯ ಇವರಿಗೆ ಸೇರಿದೆ. ಎರಡನೇ ವರ್ಷದ ಶುಲ್ಕ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಬಂದಿರುವುದರಿಂದ, ಬೋಧಕೇತರ ಸಿಬ್ಬಂದಿಗಳಿಗೆ ಶೇಕಡ 50%ರಷ್ಟು ವೇತನವನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ನೀಡಿದರೆ ಹಾಗೂ ಶೇಕಡ 50%ರಷ್ಟು ವೇತನವನ್ನು ಸಂಬಂಧಪಟ್ಟ ವಿಶ್ವವಿದ್ಯಾನಿಲಯವು ನೀಡಿದರೆ ನ್ಯಾಯ ಒದಗಿಸಿದಂತಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ, ಮಂಡ್ಯ, ಹಾಸನ, ಚಾಮರಾಜನಗರದಿಂದ ಸಂಗ್ರಹವಾಗಿರುವ ಶುಲ್ಕದಿಂದ ಅತಿಥಿ ಉಪನ್ಯಾಸಕರುಗಳಿಗೆ ವೇತನವನ್ನು ನೀಡಲು ಸಾಧ್ಯವಾಗುತ್ತಿಲ್ಲ. ನಮ್ಮಲ್ಲಿ ಸಂಗ್ರಹವಾಗುತ್ತಿರುವ ಶುಲ್ಕ ಅತೀ ಕಡಿಮೆ ಇದೆ. ಈ ಬಗ್ಗೆ ಮಾಹಿತಿಯನ್ನು ಹಣಕಾಸು ಅಧಿಕಾರಿಗಳಿಂದ ಪಡೆಯಬಹುದೆಂದು ತಿಳಿಸಿದರು. ಎಂ.ಎ. ಪ್ರೋಗ್ರಾಂಗೆ ವಿದ್ಯಾರ್ಥಿಗಳಿಂದ ಸಂಗ್ರಹವಾಗುತ್ತಿರುವ ಶುಲ್ಕ ರೂ. 11,000/- ಇದೆ. ಅದರಲ್ಲೂ ಹಿಂದುಳಿದ ವರ್ಗ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಶುಲ್ಕವು ನಮಗೆ ದೊರೆಯಬೇಕಾದರೆ ಸ್ವಲ್ಪ ಸಮಯ ಬೇಕಾಗುತ್ತದೆ. ಸರ್ಕಾರದಿಂದ ಆಯಾಯ ವಿಶ್ವವಿದ್ಯಾನಿಲಯಗಳಿ ಖರ್ಚು-ವೆಚ್ಚಗಳನ್ನು ಭರಿಸಲು ಅಥವಾ ನಮ್ಮ ವಿಶ್ವವಿದ್ಯಾನಿಲಯಕ್ಕೆ ಆ ಖರ್ಚು-ವೆಚ್ಚಗಳನ್ನು ಭರಿಸಲು ಆದೇಶವಾದಲ್ಲಿ ನಾವು ಕ್ರಮಕೈಗೊಳ್ಳಬಹುದೆಂದು ತಿಳಿಸಿದರು. ಅಲ್ಲಿನ ಕುಲಪತಿಗಳಿಗೆ ಇನ್ನೂ ವೇತನವು ಸಿಕ್ಕಿಲ್ಲ. 6-7 ತಿಂಗಳಿಂದ ಹಾಗೆಯೇ ಕರ್ತವ್ಯ ನಿರ್ವಹಿಸುತ್ತಿದ್ದಾರೆಂದು ಸಹ ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ವಿಶ್ವವಿದ್ಯಾನಿಲಯಗಳು ಕೊಟ್ಟು – ತೆಗೆದುಕೊಳ್ಳುವ ಪಾಲಿಸಿಯನ್ನು ಪಾಲಿಸಬಹುದಲ್ಲವೇ ಎಂದು ಪ್ರಶ್ನಿಸಿದರು.

ಕುಲಸಚಿವರು ಮಾತನಾಡಿ, ಮಂಡ್ಯ, ಹಾಸನ, ಚಾಮರಾಜನಗರ ವಿಶ್ವವಿದ್ಯಾನಿಲಯಗಳ ಕುಲಪತಿಗಳ ಬಳಿ ಸದರಿ ಸಿಬ್ಬಂದಿ ಮನವಿ ಸಲ್ಲಿಸಿರುವುದು ತಿಳಿದು ಬಂದಿದ್ದು, ಅವರ ಹಂತದಲ್ಲಿಯೇ ಕ್ರಮವಾಗಬೇಕೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ ಮಾತೃ ಸಂಸ್ಥೆ ಮೈಸೂರು ವಿಶ್ವವಿದ್ಯಾನಿಲಯವಾಗಿರುವುದರಿಂದ ನೀವು ಅಲ್ಲಿಯೇ ಹೋಗಿ ಕೇಳಿ ಎಂದು ಹೇಳುತ್ತಿದ್ದಾರೆ ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ಮಂಡ್ಯ, ಹಾಸನ ವಿಶ್ವವಿದ್ಯಾನಿಲಯದವರು ಹೊಸದಾಗಿ ನೇಮಕ ಮಾಡಿಕೊಳ್ಳುವ ಮನಸ್ಥಿತಿಯಲ್ಲಿದ್ದಾರೆ ಎಂದು ತಿಳಿಸಿದರು.

ಮಾನ್ಯ ಕುಲಪತಿಗಳು ಮಾತನಾಡಿ ಮೈಸೂರಿನವರೇ ಎ.ಸಿ.ಎಸ್ ಅವರು ಬಂದಿದ್ದಾರೆ. ಅವರು ವಿಭಜನೆಗೊಂಡಿರುವ ವಿಶ್ವವಿದ್ಯಾನಿಲಯಗಳ ಬಗ್ಗೆ ಶೀಘ್ರವಾಗಿ ಒಂದು ಸಭೆಯನ್ನು ಕರೆದು ತೀರ್ಮಾನವನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ. ಎಲ್ಲಾ ನೌಕರರುಗಳನ್ನು ಆಯಾಯ ವಿಶ್ವವಿದ್ಯಾನಿಲಯಕ್ಕೆ ಈಗಾಗಲೇ ನೀಡಿರುವುದರಿಂದಲೂ, ಅವರುಗಳಿಗೆ ವೇತನವನ್ನು ನಮ್ಮ

ವಿಶ್ವವಿದ್ಯಾನಿಲಯದಿಂದ ನೀಡಿದರೆ ಆಡಿಟ್ ಆಕ್ಷೇಪಣೆ ಆಗುವ ಸಾಧ್ಯತೆ ಇರುವುದರಿಂದಲೂ ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಕಾರ್ಯಭಾರದ ಅನುಗುಣವಾಗಿ ಅವರುಗಳನ್ನು ನೇಮಕ ಮಾಡಿ ಅವರುಗಳಿಗೆ ವೇತನವನ್ನು ನೀಡುತ್ತಿದ್ದೇವೆ. ಶೈಕ್ಷಣಿಕವಾಗಿ ಯಾವುದೇ ತೊಂದರೆಯಾಗಬಾರದೆಂಬ ಕಾರಣದಿಂದ. ಈ ಎಲ್ಲಾ ಸಮಸ್ಯೆಗಳು ಉದ್ಭವಿಸುವುದರಿಂದ, ಸರ್ಕಾರದಿಂದ ಆದೇಶ ಬಂದಲ್ಲಿ ಈ ವಿಷಯದ ತೀರ್ಮಾನ ತೆಗೆದುಕೊಳ್ಳಬಹುದೆಂದು ನಮಗೂ ಸಹ ಮಾನವಿಯತೆ ಇದೆ ಎಂದು ಸಭೆಗೆ ತಿಳಿಸಿದರು.

ಕುಲಸಚಿವರು ಎರಡನೇ ವಿಷಯವನ್ನು ಸಭೆಗೆ ಮಂಡಿಸಿದರು. ತಾತ್ಕಾಲಿಕ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳ ಸಂಖ್ಯೆಯನ್ನು ತರ್ಕಬದ್ಧ (Rationalize) ಗೊಳಿಸುವ ವಿಷಯವನ್ನು ಸಭೆಗೆ ಮಂಡಿಸಿದರು.

ಕುಲಪತಿಯವರು ಮಾತನಾಡಿ ಕಾರ್ಯಸೂಚಿಯಲ್ಲಿ ಇರುವ ಎರಡು ವಿಷಯಕ್ಕೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸಿ, ಆ ಸಮಿತಿಯಲ್ಲಿ ಸಿಂಡಿಕೇಟ್ ಸದಸ್ಯರು, ಪ್ರಾಧ್ಯಾಪಕರುಗಳು ಹಾಗೂ ಸೇವಾ ತಜ್ಞರುಗಳನ್ನು ನೇಮಿಸಿ ರಚಿಸೋಣವೆಂದರು.

ಶ್ರೀ ಗೋಕುಲ್ ಗೋವರ್ಧನ್ ಮಾತನಾಡಿ ಸೇವಾ ತಜ್ಞರನ್ನು ಸಮಿತಿ ಸದಸ್ಯರನ್ನಾಗಿ ಮಾಡುವುದು ಸೂಕ್ತ ಎಂದು ಸಲಹೆ ನೀಡಿ, ಆದಷ್ಟು ಬೇಗ ಸಮಿತಿಯನ್ನು ರಚಿಸಿ ಸಭೆ ನಡೆಸುವುದು ಸೂಕ್ತ ಎಂದರು.

ಕುಲಸಚಿವರು ಮಾತನಾಡಿ 19 ತಾತ್ಕಾಲಿಕ ನೌಕರರುಗಳು ಆರು ತಿಂಗಳುಗಳಿಂದಲೂ ನಿರಂತರವಾಗಿ ಕಛೇರಿಗೆ ಅನಧಿಕೃತ ಗೈರುಹಾಜರಾಗಿರುವುದರಿಂದ, ಅವರನ್ನು ಕರ್ತವ್ಯದಲ್ಲಿ ಮುಂದುವರೆಸಲು ಸಾಧ್ಯವಿಲ್ಲ ಎಂದು ಸಭೆಗೆ ತಿಳಿಸಿದರು. ಮಂಡ್ಯ ಸ್ನಾತಕೋತ್ತರ ಕೇಂದ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ತಾತ್ಕಾಲಿಕ ನೌಕರರಾದ ಶ್ರೀ ಕಾಂತಾರವರ ವಿಷಯವನ್ನು ಪ್ರಸ್ತಾಪಿಸಿದರು. ಸಮಿತಿಯನ್ನು ರಚಿಸುವಾಗ ಸೇವಾ ನಿಯಮದ ಬಗ್ಗೆ ಅರಿವು ಇರುವಂತವರನ್ನು ಅದರಲ್ಲಿ ಎಟಿಐ, ಜ್ಯುಡಿಷಿಯಲ್ (ನ್ಯಾಯಾಂಗ) ಅಕಾಡೆಮಿಯಿಂದ ಒಬ್ಬೊಬ್ಬ ನುರಿತ ತಜ್ಞರುಗಳನ್ನು ಸಹ ಸದಸ್ಯರುಗಳನ್ನಾಗಿ ನೇಮಿಸಬೇಕೆಂದು ವಿನಂತಿಸಿದರು.

ಕುಲಪತಿಯವರು ಮಾತನಾಡಿ ಸಮಿತಿಯು ಪಾರದರ್ಶಕವಾಗಿರುವುದೆಂದು ಹಾಗೂ ಈ ಸಮಿತಿಯಲ್ಲಿ ನಾವುಗಳೇ ಇದ್ದರೆ ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳಲಾಗುವುದಿಲ್ಲ. ಆದ್ದರಿಂದ ಈ ಸಮಿತಿಯಲ್ಲಿ ಸೇವಾ ನಿಯಮದ ಅರಿವುವುಳ್ಳಂತಹ ತಜ್ಞರುಗಳನ್ನು ನೇಮಕ ಮಾಡುವುದಾಗಿ ತಿಳಿಸಿದರು. ಮತ್ತು ಕುಲಸಚಿವರು ಸಮಿತಿಗೆ ಬೇಕಾದ ಅಗತ್ಯವಾದ ಎಲ್ಲಾ ಮಾಹಿತಿಯನ್ನು ಒದಗಿಸಬೇಕೆಂದು ತಿಳಿಸಿದರು. ತಾತ್ಕಾಲಿಕ ನೌಕರರ ವಿದ್ಯಾರ್ಹತೆ, ಎಷ್ಟು ವರ್ಷಗಳಿಂದ ಕಾರ್ಯನಿರ್ವಹಿಸುತ್ತಾ ಇದ್ದಾರೆ ಎಂಬ ಮಾಹಿತಿಯನ್ನು ಹಾಗೂ ಸ್ಕೂಲ್ ಆಫ್ ಇಂಜಿನಿಯರಿಂಗ್, ಸಿಸ್ಟ್, ಸ್ಕೂಲ್ ಆಫ್ ಪ್ಲಾನಿಂಗ್ & ಆರ್ಕಿಟೆಕ್ಚರ್, ಪ್ರಾಜೆಕ್ಟ್ ಹಾಗೂ ಯಾವುದೇ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ನೌಕರರುಗಳ ಮಾಹಿತಿ ಹಾಗೂ ಸ್ವಯಂ ಹಣಕಾಸು ಯೋಜನೆಯಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವಂತಹ ಎಲ್ಲಾ ನೌಕರರುಗಳ ಮಾಹಿತಿಯನ್ನು ಸಹ ಒದಗಿಸಬೇಕೆಂದು ಹಾಗೂ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ, ಸ್ನಾತಕೋತ್ತರ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವಂತಹ ಉದ್ಯೋಗಿಗಳು ಎಷ್ಟು ವರ್ಷಗಳಿಂದ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆಂಬ ಮಾಹಿತಿಯನ್ನು ನೀಡಬೇಕೆಂದು ಹಾಗೂ ಸರ್ಕಾರದಿಂದ ತೀರ್ಮಾನವಾಗಿ ಬಂದಾಗ ಅದು ದಾಖಲೆಯಾಗುತ್ತದೆಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಮೊದಲಿಗೆ ನಾವು ಮತ್ತು ಕುಲಸಚಿವರು ಸಭೆ ನಡೆಸಿ ಸಮಿತಿಯಲ್ಲಿ ಯಾರು ಇರಬೇಕೆಂದು ತೀರ್ಮಾನಿಸುತ್ತೇವೆ ಎಂದರು. ನುರಿತ ತಜ್ಞರನ್ನು ಸದಸ್ಯರನ್ನಾಗಿ ಸಮಿತಿಯಲ್ಲಿ ನೇಮಿಸುವುದಾಗಿ ಸಭೆಗೆ ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ಯಾರು ಸಮಿತಿಯ ತೀರ್ಮಾನವನ್ನು ಆಕ್ಷೇಪಣೆ ಮಾಡುತ್ತಾರೋ ಅಂತಹವರನ್ನೇ ಸಮಿತಿಯ ಸದಸ್ಯರನ್ನಾಗಿ ನೇಮಿಸುವುದು ಸೂಕ್ತ ಎಂದು ಸಲಹೆ ನೀಡಿದರು. ಪ್ರಶ್ನೆ ಮಾಡುವ ಅಧಿಕಾರ ಯಾರಿಗೆ ಇದೆ ಅಂತವರನ್ನು ನೇಮಿಸುವುದು ಸೂಕ್ತವೆಂದು ತಿಳಿಸಿದರು. ವಯಸ್ಸಾದವರಿಗೆ ಹಾಗೂ ದೀರ್ಘ ಅವಧಿಯಿಂದ ಕಾರ್ಯನಿರ್ವಹಿಸುತ್ತಿರುವವರಿಗೆ ಮಾನವಿಯತೆಯ ದೃಷ್ಟಿಯಿಂದ ಅವರ ಸೇವೆಯನ್ನು ಪರಿಗಣಿಸುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಈ ವಿಷಯವನ್ನು ಸಭೆಗೆ ತಂದಿರುವುದರಿಂದ ಯಾರಿಗೂ ತೊಂದರೆಯಾಗದಂತೆ ಕ್ರಮವಹಿಸಲಾಗುವುದೆಂದು, ಹಾಗೂ ಎಷ್ಟೋ ನುರಿತ ತಾತ್ಕಾಲಿಕ ನೌಕರರುಗಳು ಹಾಗೂ ಅತಿಥಿ ಉಪನ್ಯಾಸಕರುಗಳಿಗೆ ಬೇರೆ ಕಡೆ ಅವಕಾಶ ಬಂದರೂ ಅವರುಗಳು ಹೋಗುತ್ತಿಲ್ಲವೆಂದು ತಿಳಿಸಿದರು.

ಹಣಕಾಸು ಆಧಿಕಾರಿ ಮಾತನಾಡಿ ಚಿಕ್ಕ ವಯಸ್ಸಿನವರು ಹಾಗೂ ಉತ್ತಮ ವಿದ್ಯಾರ್ಹತೆವುಳ್ಳವರು ಇಲ್ಲೇ ಇದ್ದು ಕಾರ್ಯನಿರ್ವಹಿಸುತ್ತಿದ್ದರೆ ಅವರ ಭವಿಷ್ಯ ಹಾಳಾಗುತ್ತದೆ ಎಂದರು.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ Bio-metricಅನ್ನು ಎಲ್ಲಾ ವಿಭಾಗಗಳ ಮುಖ್ಯಸ್ಥರ ಕೊಠಡಿಯಲ್ಲೇ ಅಳವಡಿಸಬೇಕು ಎಂದು ತಿಳಿಸಿದರು.

ಮಾನ್ಯ ಕುಲಪತಿಯವರು ಮಾತನಾಡಿ ಬೆಳಗ್ಗೆ 10 ರಿಂದ ಸಂಜೆ 5.30ರ ಘಂಟೆಯವರೆಗೆ ಕಾರ್ಯನಿರ್ವಹಿಸುವಂತೆಯು ಹಾಗೂ ಗೇಟಿನಲ್ಲೇ Bio-metric ಅಥವಾ face identification ನ್ನು ಅಳವಡಿಸಬೇಕು ಎಂದು ಅಭಿಪ್ರಾಯಿಸಿದರು.

ಕುಲಸಚಿವರು ಮಾತನಾಡಿ ವಿಶ್ವವಿದ್ಯಾನಿಲಯವು ಸಾರ್ವಜನಿಕವಾದ ಶಿಕ್ಷಣ ಸಂಸ್ಥೆಯಾಗಿರುವುದರಿಂದ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಓಡಾಡುವ ಸಂಭವವಿರುತ್ತದೆ. ಅವರುಗಳಿಗೆ ಸಮಯವನ್ನು ನಿಗದಿಮಾಡಲು ಸಾಧ್ಯವಿಲ್ಲ.

ಡಾ. ಟಿ.ಆರ್. ಚಂದ್ರಶೇಖರ್ ಮಾತನಾಡಿ ವಾಕ್ ಮಾಡುವುದಕ್ಕೆ ನಿರ್ಧಿಷ್ಟವಾದ ಸಮಯವನ್ನು ನಿಗದಿ ಮಾಡಬೇಕು. ಅಗತ್ಯವಿರುವವರಿಗೆ ಪಾಸ್ ನೀಡುವುದು. ಪ್ರೈವೇಟ್ ಕಂಪನಿಗಳಲ್ಲಿ ಯಾವ ನಿಯಮಗಳನ್ನು ಅಳವಡಿಸಿಕೊಂಡಿರುತ್ತಾರೋ ಅದೇ ರೀತಿ ನಾವು ಏಕೆ ನಿಯಮಗಳನ್ನು ಅಳವಡಿಸಿಕೊಳ್ಳಬಾರದು ಎಂದು ಅಭಿಪ್ರಾಯಿಸಿದರು.

ಕುಲಸಚಿವರು ಮಾತನಾಡಿ ಇದು ಸಾರ್ವಜನಿಕ ವಿಶ್ವವಿದ್ಯಾನಿಲವಾಗಿರುವುದರಿಂದ, ವಿಶ್ವವಿದ್ಯಾನಿಲಯಕ್ಕೆ ತನ್ನದೇ ಆದ ನಿಯಮ ಮತ್ತು ನಿಬಂಧನೆಗಳು ಇರುತ್ತವೆ. ಆದ್ದರಿಂದ ನಾವು ಪ್ರೈವೇಟ್ ಕಂಪನಿಗಳು ಅಳವಡಿಸಿಕೊಂಡಿರುವ ನಿಯಮಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿದರು.

ಡಾ. ಟಿ.ಆರ್. ಚಂದ್ರಶೇಖರ್ ಅವರು ಮಾತನಾಡಿ, ವಿಧಾನ ಸೌಧವು ಸರ್ಕಾರಕ್ಕೆ ಸಂಬಂಧಪಟ್ಟಿದ್ದು, ಅಲ್ಲಿ ಯಾವ ನಿಯಮ ಮತ್ತು ನಿಬಂಧನೆಗಳು ಇವೆಯೋ ಆ ನಿಯಮಗಳನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಾಲಿಸುವುದು ಸೂಕ್ತ ಎಂದು ಸಭೆಗೆ ತಿಳಿಸಿದರು.

ಪ್ರೊ. ಯಜ್ಞಮೂರ್ತಿ ಶ್ರೀಕಾಂತ್ ಮಾತನಾಡಿ, ವಿಶ್ವವಿದ್ಯಾನಿಲಯಕ್ಕೆ ಯಾರೇ ಶೈಕ್ಷಣಿಕವಾಗಿ ಅಥವಾ ಶೈಕ್ಷಣಿಕವಲ್ಲದಿದ್ದ ವಿಷಯಕ್ಕೆ ಸಂಬಂಧಪಟ್ಟಂತೆ ಭೇಟಿ ನೀಡಿದ ಸಂದರ್ಭದಲ್ಲಿ ಅವರು ಪ್ರತಿದಿನ ಗೇಟಿನಲ್ಲಿಡುವ ಪುಸ್ತಕದಲ್ಲಿ ಬರೆದು ಒಳಗೆ ಬರುವಂತೆಯೂ ಹಾಗೂ ಯಾವ ತರಗತಿಗಳನ್ನು ತೆಗೆದುಕೊಳ್ಳುತ್ತಿದ್ದಾರೆ, ಅಥವಾ ಹಾಜರಾಗುತ್ತಿದ್ದಾರೆ ಎಂಬುದನ್ನು ಹಾಗೂ ಯಾವ ಫೈಲ್‌ಗಳಿಗೆ ಸಂಬಂಧಿಸಿದಂತೆ ಅಥವಾ ಪ್ರಕರಣಗಳಿಗೆ ಹಾಜರಾಗಿದ್ದಾರೆ ಎಂಬುದನ್ನು ಬರೆಯಲು ನಿರ್ದಿಷ್ಟಗೊಳಿಸಿದಾಗ ಅವರು ಶೈಕ್ಷಣಿಕ ವಿಷಯಕ್ಕೋ ಅಥವಾ ಇತರೆ ವಿಷಯಗಳಿಗೆ ಬಂದಿದ್ದಾರೆಂಬುದು ಬಯೊಮೆಟ್ರಿಕ್ ಅನ್ನು ಹೊರತುಪಡಿಸಿ ನಮಗೆ ತಿಳಿಯುತ್ತದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ ವಿಭಾಗದ ಮುಖ್ಯಸ್ಥರೇ ದಾರಿ ತಪ್ಪಿಸಿ, ಸರಿಯಾದ ಕಾರ್ಯಭಾರ ನೀಡದೆ ಇದ್ದಾಗ ಇದನ್ನು ಹೇಗೆ ಸರಿಪಡಿಸುವುದು ಎಂದರು.

ಕುಲಸಚಿವರು ಮಾತನಾಡಿ ತಾತ್ಕಾಲಿಕ ನೌಕರರುಗಳಷ್ಟೆ ಅಲ್ಲ, ಅತಿಥಿ ಉಪನ್ಯಾಸಕರು 4, 8, 12 ಗಂಟೆಗೆಂದು ನೇಮಕವಾಗಿದ್ದಾರೆ, ಈ ಹಿಂದಿನ ವರ್ಷಗಳಲ್ಲಿ ನೇಮಕವಾಗಿರುವುದೆಲ್ಲವನ್ನು ಸರಿಯಾದ ರೀತಿಯಲ್ಲಿ ಸರಿಪಡಿಸಬೇಕು ಎಂದು ತಿಳಿಸಿದರು.

ಶ್ರೀ ಗೋಕುಲ್ ಗೋವರ್ಧನ್ ಅವರು ಮಾತನಾಡಿ, ಮಹಿಳಾ ಅಧ್ಯಯನ ವಿಭಾಗದಲ್ಲಿ ಒಬ್ಬರು ಅತಿಥಿ ಉಪನ್ಯಾಸಕರು ಹೆರಿಗೆ ರಜೆಗೆ ಎಂದು ಆರು ತಿಂಗಳು ಬರೆದುಕೊಟ್ಟಿದ್ದಾರೆ. ಆದರೆ ಅವರ ಹೆಸರನ್ನು ಸೇರಿಸಿ ಕಾರ್ಯಭಾರವನ್ನು ನಿಗದಿ ಮಾಡುವಂತೆ ವಿಶ್ವವಿದ್ಯಾನಿಯಕ್ಕೆ ಪತ್ರವನ್ನು ಬರೆದಿರುತ್ತಾರೆ ಇದು ಹೇಗೆ ನೀಡಲು ಸಾಧ್ಯವೆಂದು ಪ್ರಶ್ನಿಸಿದರು.

ಕುಲಸಚಿವರು ಮಾತನಾಡಿ, ಅದನ್ನು ನಾವು ಸಹ ಈಗಾಗಲೇ ಪರಿಶೀಲಿಸಿದ್ದೇವೆ. ಅವರು ಹೆರಿಗೆ ರಜೆಯಿಂದ ಹಿಂದಿರುಗಿದ ನಂತರ ಅವರಿಗೂ ಕಾರ್ಯಭಾರವನ್ನು ನೀಡಬೇಕು. ಅವರು ಹೆರಿಗೆ ರಜೆಯಿಂದ ಬರುವವರೆಗೆ 6 ತಿಂಗಳಿಗೆ ಮಾತ್ರ ಕಾರ್ಯಭಾರವನ್ನು ಹಂಚಿಕೆ ಮಾಡಿ ಷರತ್ತಿಗೆ ಒಳಪಟ್ಟು ನೇಮಕ ಮಾಡಲಾಗಿದೆ. ಅವರು ಹೆರಿಗೆ ರಜೆಯಿಂದ ಹಿಂದಿರುಗಿದ ನಂತರ ಅವರಿಗೆ 12 ಗಂಟೆ ಕಾರ್ಯಭಾರ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

**ತೀರ್ಮಾನ: ಸುದೀರ್ಘವಾಗಿ ಚರ್ಚಿಸಿದ ಸಿಂಡಿಕೇಟ್ ವಿಶೇಷ ಸಭೆಯಲ್ಲಿ ಮಂಡಿಸಲಾದ ವಿಷಯಗಳಿಗೆ ಸಂಬಂಧಿಸಿದಂತೆ ಸೇವಾ ವಿಷಯಗಳು, ಕಾನೂನು ತಜ್ಞರನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲು ಹಾಗೂ ವರದಿಯನ್ನು ತ್ವರಿತವಾಗಿ ಪಡೆದು ಮುಂದಿನ ಸೂಕ್ತ ಕ್ರಮವಹಿಸಲು ತೀರ್ಮಾನಿಸಲಾಯಿತು.**

ಕೊನೆಯದಾಗಿ ಕುಲಸಚಿವರು ಮಾತನಾಡಿ ಇವತ್ತಿನ ವಿಶೇಷ ಸಭೆಗೆ ಆಗಮಿಸಿದಂತ ಮಾನ್ಯ ಕುಲಪತಿಗಳು ಹಾಗೂ ಸಿಂಡಿಕೇಟಿನ ಸದಸ್ಯರಿಗೂ ಕೂಡ ವಿಶ್ವವಿದ್ಯಾನಿಲಯದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಕುಲಸಚಿವರು ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಹಾಗೂ ಅಧ್ಯಕ್ಷರು